# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಮುಕ್ತಗಂಗೋತ್ರಿ, ಮೈಸೂರು-570006

**ದಿನಾಂಕ: 17.06.2022ರಂದು ಪೂರ್ವಾಹ್ನ 11.00** ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆಡಳಿತ ಭವನದ ವ್ಯವಸ್ಥಾಪನಾ ಮಂಡಳಿ ಸಭಾಂಗಣದಲ್ಲಿ ಮಾನ್ಯ ಕುಲಪತಿಗಳಾದ ಡಾ.ವಿದ್ಯಾಶಂಕರ್.ಎಸ್.ರವರ ಅಧ್ಯಕ್ಷತೆಯಲ್ಲಿ ವಿಶ್ವವಿದ್ಯಾನಿಲಯದ ನಡೆದ ವ್ಯವಸ್ಥಾಪನಾ ಮಂಡಳಿಯ **168ನೇ** ಸಾಮಾನ್ಯ ಸಭೆಯ ನಡವಳಿ.

| ಉಪಸ್ಥಿತರು | |
|---|---|
| **ಡಾ. ವಿದ್ಯಾಶಂಕರ್.ಎಸ್.**<br>ಮಾನ್ಯ ಕುಲಪತಿಗಳು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಅಧ್ಯಕ್ಷರು<br>ಕರಾಮುವಿ, ಮೈಸೂರು | **ಪ್ರೊ. ಆರ್. ರಾಜಣ್ಣ**<br>ಕುಲಸಚಿವರು ಹಾಗೂ<br>ವ್ಯವಸ್ಥಾಪನಾ ಮಂಡಳಿಯ ಕಾರ್ಯದರ್ಶಿಗಳು,<br>ಕರಾಮುವಿ, ಮೈಸೂರು |
| **ಶ್ರೀ ಎಲ್. ನಾಗೇಂದ್ರ**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 2373/ಸಿ, 1ನೇ ಅಡ್ಡ ರಸ್ತೆ,<br>5ನೇ ಮುಖ್ಯ ರಸ್ತೆ, ಜಯನಗರ,<br>ಮೈಸೂರು – 570 014 | **ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ**<br>ಕುಲಪತಿಗಳು, ಮಂಗಳೂರು ವಿಶ್ವವಿದ್ಯಾನಿಲಯ<br>ಹಾಗೂ ವ್ಯವಸ್ಥಾಪನಾ ಮಂಡಳಿ ಸದಸ್ಯರು,<br>ಕರಾಮುವಿ, ಮಂಗಳ ಗಂಗೋತ್ರಿ,<br>ಮಂಗಳೂರು – 574 199 |
| **ಡಾ. ಕಾಂಬ್ಳೆ ಅಶೋಕ್**<br>ಡೀನ್ (ಶೈಕ್ಷಣಿಕ) ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮೈಸೂರು | **ಡಾ. ಆರ್.ಹೆಚ್. ಅಕಮಂಚಿ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 55, 'ಕಾಮಧೇನು'<br>ಕೃಷ್ಣಾ ಬಡಾವಣೆ, ಲಕ್ಷ್ಮೀ ನಗರ, ಗೋಕುಲ ರಸ್ತೆ,<br>ಹುಬ್ಬಳ್ಳಿ – 580 030 |
| **ಪ್ರೊ. ಯಶಸ್ವಿನಿ.ಎಸ್.**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 303, 2ನೇ ಮಹಡಿ<br>ಗೌರವ್ ದಿ ರೆಸಿಡೆನ್ಸಿ ಅಪಾರ್ಟ್‌ಮೆಂಟ್<br>1ನೇ ಮುಖ್ಯ ರಸ್ತೆ, ಲಕ್ಷ್ಮೀ ಪುರಂ,<br>ಮೈಸೂರು – 570 004 | **ಶ್ರೀ ಎನ್. ಕೃಷ್ಣೇಗೌಡ**<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ನಂ. 150, 2ನೇ ಅಡ್ಡ ರಸ್ತೆ, 'ಐ' ಬ್ಲಾಕ್<br>ಕುವೆಂಪುನಗರ, ಮೈಸೂರು – 570 023 |
| **ಡಾ. ಪ್ರದೀಪ್.ಪಿ.ಆರ್.,**<br>ನಂ. 1653, 1ನೇ ಮಹಡಿ, 5ನೇ ಅಡ್ಡ ರಸ್ತೆ,<br>6ನೇ ಸಿ ಮುಖ್ಯ ರಸ್ತೆ, ಆರ್.ಪಿ.ಸಿ. ಬಡಾವಣೆ,<br>ಬೆಂಗಳೂರು – 560 040 | **ಶ್ರೀಮತಿ ಲಾವಣ್ಯ.ಪಿ.**<br>ನಂ. 401, ಟಿ.ಎಫ್. ಮಾಲ್ಗುಡಿ ಅಪಾರ್ಟ್‌ಮೆಂಟ್<br>ನಾದಬ್ರಹ್ಮ ಸಂಗೀತ ಸಭಾ ಎದುರುಗಡೆ<br>ಲಕ್ಷ್ಮೀಪುರಂ,<br>ಮೈಸೂರು – 570 004 |

ಕುಲಪತಿಗಳು ಕುಲಸಚಿವರು

| ಅನುಪಸ್ಥಿತರು | |
|---|---|
| **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ), ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು<br>ಬೆಂಗಳೂರು – 560 001 | **ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು**<br>ಹಣಕಾಸು ಇಲಾಖೆ (ವೆಚ್ಚಗಳು) ಹಾಗೂ<br>ವ್ಯವಸ್ಥಾಪನ ಮಂಡಳಿಯ ಸದಸ್ಯರು,<br>ಬೆಂಗಳೂರು – 560 001 |
| **ಶ್ರೀ ಬಿ.ಸಿ. ನಾಗೇಶ್.,**<br>ವಿಧಾನ ಸಭಾ ಸದಸ್ಯರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 93, 1ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ<br>ಕೆ.ಆರ್. ಬಡಾವಣೆ, ತಿಪಟೂರು ತಾಲ್ಲೂಕು<br>ತುಮಕೂರು ಜಿಲ್ಲೆ – 572 201 | **ಶ್ರೀ ಅಡಗೂರು ಹೆಚ್. ವಿಶ್ವನಾಥ್**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಮನೆ ನಂ. 1179, 3ನೇ ಮೇನ್, 3ನೇ ಕ್ರಾಸ್<br>ಅರವಿಂದ ನಗರ, ಮೈಸೂರು ಜಿಲ್ಲೆ |
| **ಶ್ರೀ ಪುಟ್ಟಣ್ಣ**<br>ವಿಧಾನ ಪರಿಷತ್ ಶಾಸಕರು ಹಾಗೂ<br>ವ್ಯವಸ್ಥಾಪನಾ ಮಂಡಳಿ ಸದಸ್ಯರು, ಕರಾಮುವಿ<br>ಕಛೇರಿ ವಿಳಾಸ : ನಂ.5009<br>5ನೇ ಮಹಡಿ, ಶಾಸಕರ ಭವನ- 5<br>ಬೆಂಗಳೂರು – 560 001 | -- |

ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಪತಿಗಳು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು.

ನಂತರ, ಮಾನ್ಯ ಕುಲಪತಿಗಳು ವಿಷಯಸೂಚಿ ಪ್ರಕಾರ 168ನೇ ಸಾಮಾನ್ಯ ಸಭೆಗೆ ಮಂಡಿಸಿದ್ದ ವಿಷಯಗಳನ್ನು ಚರ್ಚಿಸಲು ಆರಂಭಿಸಿದರು.

**<u>ವಿಷಯ ಸಂಖ್ಯೆ : 168.01</u>**

ಅ) ದಿನಾಂಕ: 24.04.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 57ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸುವ ಬಗ್ಗೆ.

ಆ) ದಿನಾಂಕ: 24.04.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 57ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮದ ವರದಿಯನ್ನು ಅನುಮೋದಿಸುವ ಬಗ್ಗೆ.

**ಅ) ದಿನಾಂಕ: 24.04.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 57ನೇ ವಿಶೇಷ ಸಭೆಯ ನಡವಳಿಯನ್ನು ಸ್ಥಿರೀಕರಿಸಲಾಯಿತು.**

**ಆ) ದಿನಾಂಕ: 24.04.2022ರಂದು ನಡೆದ ವ್ಯವಸ್ಥಾಪನಾ ಮಂಡಳಿಯ 57ನೇ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು.**

* * * * * * *

**<u>ವಿಷಯ ಸಂಖ್ಯೆ : 168.02</u>**

**ವಿಷಯ :** ವಿಶ್ವವಿದ್ಯಾನಿಲಯದಲ್ಲಿ ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ (PMEB) ಸ್ಥಾಪನೆ ಮತ್ತು ನಿರ್ದೇಶಕರನ್ನು ನೇಮಿಸಿರುವ ಬಗ್ಗೆ.

**ಉಲ್ಲೇಖ:** 1. ನಿರ್ದೇಶಕರು CIQA ಇವರ ಪತ್ರ ದಿನಾಂಕ: 05.02.2022.

2. ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಜಿಎಲ್-2/02/694/2021-22. ದಿ: 17.02.2022.

* * * * *

ಕುಲಪತಿಗಳು



ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ವಿವಿಧ ಶೈಕ್ಷಣಿಕ ಚಟುವಟಿಕೆಗಳ ವ್ಯವಸ್ಥಿತ ಯೋಜನೆಗಾಗಿ ವಿ.ವಿ.ನಿಲಯಕ್ಕೆ ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ (Planning, Monitoring and Evaluation Board) ಅನ್ನು ನೂತನವಾಗಿ ಸ್ಥಾಪನೆ ಮತ್ತು ನಿರ್ದೇಶಕರನ್ನು ನೇಮಿಸುವ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಡಾ. ಮಹೇಶ್.ವಿ, ಮುಖ್ಯಸ್ಥರು, ವಾಣಿಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ ಇವರನ್ನು ವಿಭಾಗದ ನಿರ್ವಹಣೆಯ ಜೊತೆಗೆ ಹೆಚ್ಚುವರಿಯಾಗಿ ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ (PMEB) ಗೆ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ.

ಯೋಜನಾ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ (PMEB) ಅನ್ನು ನೂತನವಾಗಿ ಸ್ಥಾಪನೆ ಮತ್ತು ನಿರ್ದೇಶಕರನ್ನು ನೇಮಿಸಿರುವ ಸಂಬಂಧ ದಿನಾಂಕ: 11.02.2022 ರಂದು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ನಿರ್ದೇಶಕರನ್ನಾಗಿ ನೇಮಿಸಿರುವ ಬಗ್ಗೆ ವ್ಯವಸ್ಥಾಪನಾ ಮಂಡಳಿಯ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯಕ್ಕೆ ಸಂಬಂಧಿಸಿದಂತೆ ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.**

* * * * * * *

**ವಿಷಯ ಸಂಖ್ಯೆ : 168.03**

**ವಿಷಯ : ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಲೇಖನ ಸಾಮಗ್ರಿ/ಉತ್ಪನ್ನಗಳನ್ನು ಖರೀದಿಸಲು ಆಹ್ವಾನಿಸಲಾಗಿದ್ದ ಟೆಂಡರ್‌ನಲ್ಲಿ ಅರ್ಹ ಟೆಂಡರ್ ದಾರರನ್ನು ಅಂತಿಮಗೊಳಿಸುವ ಬಗೆಗೆ.**

* * * * *

ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಲೇಖನ ಸಾಮಗ್ರಿ/ಉತ್ಪನ್ನಗಳನ್ನು ಖರೀದಿಸುವ ಸಂಬಂಧ ಕೆ.ಟಿ.ಪಿ.ಪಿ.ಕಾಯ್ದೆ/ನಿಯಮಗಳನ್ವಯ ದಿನಾಂಕ: 17.12.2021 ರ ಅಧಿಸೂಚನೆಯ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್ ಆಹ್ವಾನಿಸಲಾಗಿತ್ತು.

ಸದರಿ ಟೆಂಡರ್‌ನಲ್ಲಿ ಏಳು ಸಂಸ್ಥೆಯವರು ಬಿಡ್ ಸಲ್ಲಿಸಿದ್ದರು. ಟೆಂಡರ್ ಅನ್ನು ಅಂತಿಮಗೊಳಿಸುವ ಸಂಬಂಧ ರಚಿಸಲಾಗಿದ್ದ Tender Evaluation Committee ಯು ದಿನಾಂಕ: 08.02.2022 ರಂದು ನಡೆದ ಸಭೆಯಲ್ಲಿ ತಾಂತ್ರಿಕ ಬಿಡ್ ದಾಖಲೆಗಳನ್ನು ಪರಿಶೀಲಿಸಿ,

- 1. Gami Paresh Naran(M/s. Sai Office Suppliers, Bangalore), 2. Kamlesh Harilal Devda (M/s. Apex Enterprises, Mumbai), 4. N.G.Girish (M/s. Pushpak Agencies, Mysuru), 6.Rajesh Seetharama (M/s. Shrinidhi Computers Pvt Ltd, Mangalore) ಮತ್ತು 7.Soumya.M. ( M/s. Sumukha Office Solutions, Mysuru) ಈ ಐದು ಸಂಸ್ಥೆಗಳು ಸಲ್ಲಿಸಿರುವ ಬಿಡ್ ದಾಖಲೆಗಳು ಸಮಪರ್ಕವಾಗಿದ್ದರಿಂದ ಇವರ ಬಿಡ್‌ಗಳನ್ನು ಸಭೆಯು ಅಂಗೀಕರಿಸಿ ಈ ಸಂಸ್ಥೆಗಳ ಆರ್ಥಿಕ ಬಿಡ್ ತೆರೆಯಲು ಸಭೆಯು ಒಪ್ಪಿಗೆ ಸೂಚಿಸಿ ಶಿಫಾರಸ್ಸು ಮಾಡಿತ್ತು.

ಕುಲಪತಿಗಳು

ಕುಲಸಚಿವರು

ಉಳಿದಂತೆ 3. Monika Manubhai Prajapati (M/s. Makmoni Enterprises, Mumbai) ಮತ್ತು 5. Prabhu Mandan Dhadhi (M/s. Bahuchar Traders, Mumbai) ಈ ಎರಡು ಸಂಸ್ಥೆಯವರು ಟೆಂಡರ್‌ನಲ್ಲಿ ಕೋರಿರುವ ದಾಖಲಾತಿಗಳನ್ನು ಸಮರ್ಪಕವಾಗಿ ಸಲ್ಲಿಸದ ಕಾರಣ ಇವರುಗಳ ತಾಂತ್ರಿಕ ಬಿಡ್ ಅನ್ನು ತಿರಸ್ಕರಿಸಿ ಶಿಫಾರಸ್ಸು ಮಾಡಿರುತ್ತಾರೆ.

1) ದಿನಾಂಕ: 02.03.2022 ರಂದು ನಡೆದ ಸಭೆಯಲ್ಲಿ ಆರ್ಥಿಕ ಬಿಡ್‌ಗೆ ಅರ್ಹತೆ ಹೊಂದಿದಂತಹ ಐದು ಸಂಸ್ಥೆಯವರು ಸಲ್ಲಿಸಿದ್ದ ಆರ್ಥಿಕ ಬಿಡ್‌ನ ದರಗಳನ್ನು ಪರಿಶೀಲಿಸಿದ ಸಂದರ್ಭದಲ್ಲಿ Kamlesh Harilal Devda ( M/s. Apex Enterprises, Mumbai), ಇವರು 30 ಬಗೆಯ ಕಾಟ್ರಿಡ್ಜ್/ಟೋನರ್‌ಗಳಿಗೆ ನಮೂದಿಸಿದ್ದ ಎಲ್-1 ದರವು ಮಾರುಕಟ್ಟೆ ಮತ್ತು ಕಂಪನಿ ದರಗಳಿಗಿಂತಲೂ ತೀರಾ ಕಡಿಮೆ ದರಗಳನ್ನು ನಮೂದಿಸಿರುವುದು ಕಂಡು ಬಂದ್ದಿದ್ದರಿಂದ KTPP Rules 23(3)(2) ನಿಯಮದನ್ವಯ, 30 ಬಗೆಯ ಕಾಟ್ರಿಡ್ಜ್/ಟೋನರ್‌ಗಳ Genuinity ಪರೀಕ್ಷಿಸಲು ಖುದ್ದಾಗಿ ಹಾಜರಾಗಲು ಸೂಚಿಸಲಾಗಿತ್ತು ಸದರಿಯವರು ಹಾಜರಾಗದ ಕಾರಣ KTPP Rules 24 (3) ರ ನಿಯಮದನ್ವಯ ಸದರಿಯವರ ಆರ್ಥಿಕ ಬಿಡ್‌ನ್ನು ತಿರಸ್ಕರಿಸಿ, ಎಲ್-2 ಬಿಡ್‌ದಾರರೊಂದಿಗೆ 30 ಬಗೆಯ ಕಾಟ್ರಿಡ್ಜ್/ಟೋನರ್ಸ್‌ಗಳಿಗೆ ದರ ಸಂಧಾನ ನಡೆಸಿ ಅಂತಿಮಗೊಳಿಸಲಾಗಿರುತ್ತದೆ ಮತ್ತು ಒಂದೇ ದರ ನಮೂದಿಸಿದ್ದ 07 ಸಾಮಗ್ರಿಗಳಿಗೆ ದರ ಸಂಧಾನ ನಡೆಸಿ ಅಂತಿಮಗೊಳಿಸಲಾಗಿರುತ್ತದೆ ದಿನಾಂಕ: 16.03.2022 ರಂದು ನಡೆದ ಸಭೆಯಲ್ಲಿ ನಾಲ್ಕು ಸಂಸ್ಥೆಗಳ ಆರ್ಥಿಕ ಬಿಡ್ ದರಗಳನ್ನು ಪರಿಶೀಲಿಸಿ ಒಟ್ಟು 138 ಲೇಖನ ಸಾಮಗ್ರಿ/ಉತ್ಪನ್ನಗಳಿಗೆ ಬಿಡ್‌ದಾರರು ನಮೂದಿಸಿರುವ ಎಲ್-1 ದರಗಳನ್ನು ಪರಿಶೀಲಿಸಿ ಆರ್ಥಿಕ ಬಿಡ್‌ನ್ನು ಅಂತಿಮಗೊಳಿಸಲಾಗಿರುತ್ತದೆ.

2) ಅದರಂತೆ ಅಂತಿಮವಾಗಿ 4(ನಾಲ್ಕು) ಸಂಸ್ಥೆಯ ಬಿಡ್ ದಾರರ ಎಲ್-1 ದರವು ಈ ಕೆಳಕಂಡಂತೆ ಇರುತ್ತದೆ.

1) M/s. SHRINIDHI COMPUTERS PVT LTD, MANGALORE ಇವರು ಒಟ್ಟು 19 ಬಗೆಯ ಲೇಖನ/ ಸಾಮಗ್ರಿ/ಉತ್ಪನ್ನಗಳಿಗೆ ಕಡಿಮೆ ದರ ನಮೂದಿಸಿರುತ್ತಾರೆ.
2) M/s. SAI OFFICE SUPPLIERS, BANGALORE ಇವರು ಒಟ್ಟು 26 ಬಗೆಯ ಲೇಖನಸಾಮಗ್ರಿ/ಉತ್ಪನ್ನಗಳಿಗೆ ಕಡಿಮೆ ದರ ನಮೂದಿಸಿರುತ್ತಾರೆ.
3) M/s. PUSHPAK AGENCIES, MYSURU ಇವರು ಒಟ್ಟು 10 ಬಗೆಯ ಲೇಖನಸಾಮಗ್ರಿ/ಉತ್ಪನ್ನಗಳಿಗೆ ಕಡಿಮೆ ದರ ನಮೂದಿಸಿರುತ್ತಾರೆ.
4) M/s. SUMUKHA OFFICE SOLUTIONS, MYSURU ಇವರು ಒಟ್ಟು 83 ಬಗೆಯ ಲೇಖನಸಾಮಗ್ರಿ/ಉತ್ಪನ್ನಗಳಿಗೆ ಕಡಿಮೆ ದರ ನಮೂದಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಟೆಂಡರ್ ಮೌಲ್ಯಮಾಪನಾ ಸಮಿತಿಯು ಟೆಂಡರನ್ನು ಅಂತಿಮಗೊಳಿಸಿರುವ ಕ್ರಮಕ್ಕೆ, ಎಲ್-1 ಬಿಡ್‌ದಾರರದೊಂದಿಗೆ ಮಾಡಿಕೊಂಡಿರುವ ದರ ಕರಾರು ಒಪ್ಪಂದಕ್ಕೆ ಮತ್ತು ಅರ್ಹತೆ ಪಡೆದ ಎಲ್-1 ಬಿಡ್‌ದಾರರಿಂದ ಅಗತ್ಯ ಲೇಖನ ಸಾಮಗ್ರಿ/ಉತ್ಪನ್ನಗಳನ್ನು ಬೇಡಿಕೆ ಅನುಸಾರ ಎಲ್-1 ದರಗಳಲ್ಲಿ ಖರೀದಿಸುವ ಸಂಬಂಧ ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿದೆ.

<u>ತೀರ್ಮಾನ</u> :

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯ ಕುರಿತು ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.**

* * * * * * *

ಕುಲಪತಿಗಳು

ಕುಲಸಚಿವರು

ವಿಷಯ ಸಂಖ್ಯೆ : 168.04

ವಿಷಯ : 30ನೇ ಕಾಗದ ಗುಣಮಟ್ಟ ಪರೀಕ್ಷೆ ಸಮಿತಿ ಸಭೆಯ ನಡವಳಿಯನ್ನು ಅನುಮೋದಿಸುವ ಬಗೆಗೆ.

* * * * *

2020-21ರ ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ವಿತರಿಸಲು ಕೊರತೆಯಾಗಿದ್ದ ವಿವಿಧ ಶಿಕ್ಷಣಕ್ರಮಗಳ ಅಧ್ಯಯನ ಸಾಮಗ್ರಿಗಳ ಮುದ್ರಣಕ್ಕೆ ಸಂಬಂಧಿಸಿದಂತೆ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಮೂಲಕ ವಿವಿ ನಿಲಯವು ನಿಗದಿಪಡಿಸಿರುವ ದರಗಳಲ್ಲಿ ಖಾಸಗಿ ಮುದ್ರಕರಿಂದ ಅಧ್ಯಯನ ಸಾಮಗ್ರಿಗಳನ್ನು ಮುದ್ರಿಸಿ, ಸರಬರಾಜು ಮಾಡಿಕೊಂಡು ವಿದ್ಯಾರ್ಥಿಗಳಿಗೆ ವಿತರಿಸಲಾಗಿರುತ್ತದೆ ಹಾಗೂ ವಿವಿಯ ಇತರೆ ವಿಭಾಗಗಳಿಂದ ಬಂದ ಪುಸ್ತಕಗಳನ್ನು ಮುದ್ರಿಸಿ, ಸರಬರಾಜಿನ ನಂತರ ಆಯಾಯ ವಿಭಾಗದವರಿಗೆ ವಿತರಿಸಲಾಗಿರುತ್ತದೆ.

ಪ್ರಸ್ತುತ ಸದರಿ ಮುದ್ರಕರ ಹುಂಡಿಗಳಲ್ಲಿ ಕಾಗದ ಗುಣಮಟ್ಟ ಪರೀಕ್ಷೆಯ ಉದ್ದೇಶದಿಂದ ಪ್ರತಿ ಹುಂಡಿಯಲ್ಲಿ ಶೇಕಡ 25ರ ಮೊತ್ತವನ್ನು ವಿವಿ ನಿಲಯವು ಉಳಿಸಿಕೊಂಡಿದ್ದು, ವಿವಿ ನಿಲಯವು ರಚಿಸಿರುವ ತಾಂತ್ರಿಕ ತಜ್ಞರನ್ನು ಒಳಗೊಂಡಂತೆ ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯನ್ನು ದಿನಾಂಕ : 21.05.2022 ರಂದು ನಡೆಸಲಾಗಿರುತ್ತದೆ. ಸದರಿ ಸಭೆಯಲ್ಲಿ ಮುದ್ರಕರು ಮುದ್ರಿಸಿ ಸರಬರಾಜು ಮಾಡಿರುವ ಅಧ್ಯಯನ ಸಾಮಗ್ರಿಗಳ ಕಾಗದ ಗುಣಮಟ್ಟ ಪರೀಕ್ಷೆಯನ್ನು ಸರ್ಕಾರಿ ಮುದ್ರಣಾಲಯದ ತಾಂತ್ರಿಕ ತಜ್ಞರ ಉಪಸ್ಥಿತಿಯಲ್ಲಿ ಸಮಿತಿಯು ವಿವಿಯ ಟೆಂಡರ್‌ನ ನಿಯಮ ಮತ್ತು ಷರತ್ತಿನಲ್ಲಿ ಅಳವಡಿಸಿಕೊಂಡಿರುವ Specifications ನಂತೆ ಪರಿಶೀಲಿಸಿ, ದೃಢೀಕರಿಸಿದ್ದು, ನಿಯಮಾನುಸಾರ ವಿವಿ ನಿಲಯವು ಉಳಿಸಿಕೊಂಡಿರುವ ಭದ್ರತಾ ಠೇವಣಿ ಮೊತ್ತವನ್ನು ಆಡಳಿತಾತ್ಮಕ ಅನುಮೋದನೆ ಪಡೆದು ಪಾವತಿಸಬಹುದೆಂದು ಶಿಫಾರಸ್ಸು ಮಾಡಿರುತ್ತದೆ. ಹಾಗಾಗಿ ಸಂಬಂಧಪಟ್ಟ ಮುದ್ರಕರಿಗೆ 09 ಹುಂಡಿಗಳಲ್ಲಿ ಭದ್ರತಾ ಠೇವಣಿಯಾಗಿ ಕಟಾಯಿಸಿಕೊಂಡಿರುವ ಉಳಿದ ಶೇಕಡ 25ರ ಒಟ್ಟು ಮೊತ್ತ **ರೂ.18,69,309/- (ರೂಪಾಯಿ ಹದಿನೆಂಟು ಲಕ್ಷದ ಅರವತ್ತೊಂಬತ್ತು ಸಾವಿರದ ಮೂರು ನೂರ ಒಂಬತ್ತು ಮಾತ್ರ)** ಗಳನ್ನು ಸಂಬಂಧಪಟ್ಟ ಮುದ್ರಕರಿಗೆ ಪಾವತಿಸುವ ಸಂಬಂಧ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ/ನಿರ್ಣಯಕ್ಕಾಗಿ ಮಂಡಿಸಲಾಗಿದೆ.

ತೀರ್ಮಾನ :

**ಸದರಿ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಟೆಂಡರ್ ರಚನಾ ಸಲಹಾ ಮತ್ತು ಪರಿಶೀಲನಾ ಸಮಿತಿ ಸಭೆಯ ಶಿಫಾರಸ್ಸಿನಂತೆ ಹಾಗೂ ಟೆಂಡರ್ ನಿಯಮಗಳನ್ವಯ ಭದ್ರತಾ ಠೇವಣಿಯ ಶೇ. 25ರಷ್ಟು ಉಳಿಕೆ ಮೊತ್ತ ರೂ. 18,69,309/- ಗಳನ್ನು ಮುದ್ರಕರಿಗೆ ಪಾವತಿಸಲು ಸಭೆಯು ಅನುಮೋದಿಸಿತು.**

* * * * * * *

ವಿಷಯ ಸಂಖ್ಯೆ : 168.05

ವಿಷಯ : ಕರಾಮುವಿ ಸಹಭಾಗಿತ್ವ ಸಂಸ್ಥೆಯಾಗಿದ್ದ **Karnataka International Educational Trust** ಬೆಂಗಳೂರು ಇವರು **nonrefundable deposit** ಹಿಂದಿರುಗಿಸಲು **Legal Notice** ನೀಡಿರುವ ಬಗ್ಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಹಭಾಗಿತ್ವ ಸಂಸ್ಥೆಯಾಗಿದ್ದ Karnataka International Educational Trust, ಬೆಂಗಳೂರು, ಇವರು non-refundable deposit 15,00,000/- ಹಾಗೂ

ಕುಲಪತಿಗಳು



ಕುಲಸಚಿವರು

ಸದರಿ ಸಂಸ್ಥೆಯ ಅಧ್ಯಯನ ಕೇಂದ್ರಗಳನ್ನು ತೆರೆಯಲು ಪಾವತಿಸಿದ್ದ, ರೂ.12,06,000/- ಹಿಂದಿರುಗಿಸಲು Legal Notice ನೀಡಿರುತ್ತಾರೆ.

MOUನಲ್ಲಿ non-refundable deposit ಹಿಂದಿರುಗಿಸಲಾಗುವುದಿಲ್ಲ ಎಂದು ಒಪ್ಪಂದವಾಗಿರುತ್ತದೆ. ಹಾಗೂ ಸದರಿ ಸಂಸ್ಥೆಯು ಒಟ್ಟು 29 ಅಧ್ಯಯನ ಕೇಂದ್ರಗಳನ್ನು ತೆರೆದಿದ್ದು, ಇದಕ್ಕೆ ಪಾವತಿಸಿರುವ ಮೊತ್ತ ಕೂಡ non-refundable ಗಳಾಗಿರುತ್ತದೆ. ಕರಾಮುವಿಯು ಒಡಂಬಡಿಕೆ ಮಾಡಿಕೊಂಡ ನಂತರ ಯುಜಿಸಿ ಮಾನ್ಯತೆ ಪಡೆಯದೆ ತನ್ನ ಕಾರ್ಯವೈಖರಿಯನ್ನು ಸರಿಯಾಗಿ ನಿರ್ವಹಿಸದಿರುವುದರಿಂದ ಸದರಿ ಮೊತ್ತಗಳನ್ನು ಹಿಂತಿರುಗಿಸಬೇಕೆಂದು Legal Notice ಮುಖಾಂತರ ತಿಳಿಸಿರುತ್ತಾರೆ. ಸದರಿ ವಿಷಯವನ್ನು ವ್ಯವಸ್ಥಾಪನ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ :

**ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು, ಸಹಭಾಗಿತ್ವ ಸಂಸ್ಥೆಯು ವಿ.ವಿ.ನಿಲಯಕ್ಕೆ ಪಾವತಿಸಿರುವ Deposit ಮೊತ್ತವು ಒಡಂಬಡಿಕೆಯ ರೀತ್ಯ "Non-refundable" ಎಂದು MOU ಆಗಿರುವುದರಿಂದ ಹಿಂದಿರುಗಿಸುವುದು ಬೇಡವೆಂದು ತೀರ್ಮಾನಿಸಿತು.**

* * * * * * *

**ವಿಷಯ ಸಂಖ್ಯೆ : 168.06**

**ವಿಷಯ: Sri.S.Nanda Kumar, ವಕೀಲರು, ಮೈಸೂರು ಇವರಿಗೆ Arbitration Case No.1/2017 ಅನ್ನು ವಿ.ವಿ ಪರ ಪ್ರತಿನಿಧಿಸಿರುವ ಸಂಬಂಧ ವಕೀಲ ಶುಲ್ಕ ಪಾವತಿಸುವ ಬಗ್ಗೆ.**

* * * * *

M/s Algol Universal Trust, Faridabad, Haryana ಇವರು ವಿಶ್ವವಿದ್ಯಾನಿಲಯದ ವಿರುದ್ಧ Smt.H.S.Kamala, Retd., District Civil Judge and Sole Arbitrator, Mysuru ಇವರಲ್ಲಿ ದಾಖಲಿಸಿದ್ದ Arbitration Case No.1/2017 ದಿನಾಂಕ:23.12.2021ರಂದು ಇತ್ಯರ್ಥಗೊಂಡಿರುತ್ತದೆ.

ವಿಶ್ವವಿದ್ಯಾನಿಲಯದ ಪರವಾಗಿ ಸದರಿ ಪ್ರಕರಣವನ್ನು ಪ್ರತಿನಿಧಿಸಲು Sri.Santhosh.S.Nagarale, ವಕೀಲರು, ಬೆಂಗಳೂರು ಇವರನ್ನು ದಿನಾಂಕ: 02.11.2017ರಂದು ನೇಮಿಸಲಾಗಿರುತ್ತದೆ. ಸದರಿ ಪ್ರಕರಣದಲ್ಲಿ Sri.Santhosh.S.Nagarale ಇವರ ಜೊತೆಗೆ ಸ್ಥಳೀಯ ವಕೀಲರಾದ Sri.S.Nanda Kumar, ಮೈಸೂರು ಇವರನ್ನು ಸಹ ಪ್ರತಿನಿದಿಸಲು ದಿನಾಂಕ:11.12.2017ರಂದು ನೇಮಿಸಲಾಗಿರುತ್ತದೆ.

ಮೇಲ್ಕಂಡ ವಕೀಲರುಗಳು ಪ್ರಕರಣಕ್ಕೆ ವಿಶ್ವವಿದ್ಯಾನಿಲಯದ ಪರವಾಗಿ Written Statements (Objections) ಸಲ್ಲಿಸಿ, ಅರ್ಜಿದಾರರ ಮತ್ತು ಅವರ ಪರ ಸಾಕ್ಷ್ಯಾ ನುಡಿದ (Evidence) ಸಾಕ್ಷ್ಯಾದಾರ PW-1 & PW-2 ಅನ್ನು ಪಾಟಿ ಸವಾಲು ಮಾಡಿರುತ್ತಾರೆ (Cross Examinations). Sri.Santhosh.S.Nagarale ಇವರು ಇ-ಮೇಲ್ ದಿನಾಂಕ: 29.07.2020ರಲ್ಲಿ

ಕುಲಪತಿಗಳು



ಕುಲಸಚಿವರು

ತಮಗೆ Covid-19 ಉಂಟಾಗಿರುವ ಕಾರಣ ವೈದರ ಸಲಹೆ ಮೇರೆಗೆ ಮೈಸೂರು ಇಲ್ಲಿ ನಡೆಯುತ್ತಿರುವ ಮೇಲ್ಕಂಡ ಪ್ರಕರಣದಿಂದ ತಮ್ಮನ್ನು relieve ಮಾಡಬೇಕೆಂದು ಕೋರಿದ್ದು, ಅದರಂತೆ ಸದರಿಯವರನ್ನು ಪ್ರಕರಣದಿಂದ relieve ಮಾಡಲಾಗಿ, ಸದರಿ ಪ್ರಕರಣವನ್ನು ಪೂರ್ಣ ಪ್ರಮಾಣದಲ್ಲಿ ಪ್ರತಿನಿಧಿಸಲು Sri.Nanda Kumar.S ಇವರಿಗೆ ವಹಿಸಲಾಗಿರುತ್ತದೆ.

Sri.S.Nanda Kumar ಇವರು ಅರ್ಜಿದಾರರ ಪರ ಹಾಜರಿದ್ದ ಸಾಕ್ಷ್ಯಾ PW-3, PW-4 & PW-5 ಅನ್ನು ಪಾಟಿ ಸವಾಲು ಮಾಡಿರುತ್ತಾರೆ ಮತ್ತು ವಿಶ್ವವಿದ್ಯಾನಿಲಯದ ಪರವಾಗಿ ಸಾಕ್ಷೀಯ Witness Affidavit ಸಲ್ಲಿಸಿದ್ದು, ವಿ.ವಿ.ನಿಲಯದ ಪರವಾಗಿ The Officers concerned, ICICI Bank, Axis Bank and Punjab National Bank (Oriental Bank of Commerce), Clearing Wing, National Payments Corporation of India, Unit No. B 702, 7th Floor, Tower 'B' Commerce zone, I T Park, Mount Poonamalee , Porur, Chennai, Tamil Nadu ಇವರುಗಳನ್ನು ವಿ.ವಿ.ನಿಲಯದ ಪರವಾಗಿ ಹಾಜರಾಗಿ ಸಾಕ್ಷ್ಯ ನುಡಿಯಲು ಅಗತ್ಯ ಕ್ರಮಕೈಗೊಂಡು ಪ್ರಕರಣವು ಇತ್ಯರ್ಥಗೊಳ್ಳುವವರೆಗೂ ಪ್ರತಿನಿಧಿಸಿರುತ್ತಾರೆ.

Sri.S.Nanda Kumar ಇವರು ಮೇಲ್ಕಂಡ ಪತ್ರ/ಹುಂಡಿಯಲ್ಲಿ ಪ್ರಕರಣದ ಆದೇಶದ ವಿರುದ್ಧ ಸೂಕ್ತ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಬಹುದು ಎಂಬುದಾಗಿ ಅಭಿಪ್ರಾಯ ನೀಡಿ, ವಿ.ವಿ ಪರ ಪ್ರಕರಣವನ್ನು ಪ್ರತಿನಿಧಿಸುವ ಸಂಬಂಧ ಒಟ್ಟು ವಕೀಲ ಶುಲ್ಕ ರೂ.6,86,000/- (ಆರು ಲಕ್ಷದ ಎಂಬತ್ತಾರು ಸಾವಿರ ರೂಪಾಯಿ ಮಾತ್ರ) ಗಳನ್ನು ಪಾವತಿಸುವಂತೆ ಕೋರಿರುತ್ತಾರೆ. **(ಅನುಬಂಧ-ಅ)**

ಸದರಿ ಪ್ರಕರಣವನ್ನು ಹೆಚ್ಚುವರಿಯಾಗಿ ಪ್ರತಿನಿಧಿಸಲು Sri.K.S.Mahadeva Prasad, ವಕೀಲರು, ಮೈಸೂರು ಇವರನ್ನು ದಿನಾಂಕ: 28.09.2021ರಂದು ನೇಮಿಸಲಾಗಿದ್ದು, ಸದರಿ ವಕೀಲರು ಪ್ರಕರಣಕ್ಕೆ ವಿ.ವಿ ಪರವಾಗಿ ಹಾಜರಾಗಿ ಪ್ರಕರಣಕ್ಕೆ ಲಿಖಿತ ವಾದ (Written Arguments) ಅನ್ನು ಸಿದ್ಧಪಡಿಸಿ ಮತ್ತು On-line ಮೂಲಕ ಪ್ರಕರಣ ಪ್ರತಿನಿಧಿಸಿರುತ್ತಾರೆ. ಈ ಸಂಬಂಧ Sri.K.S.Mahadeva Prasad, ವಕೀಲರು, ಮೈಸೂರು ಇವರಿಗೆ ದಿನಾಂಕ: 05.02.2022ರಂದು ನಡೆದ ವ್ಯವಸ್ಥಾಪನಾ ಮಂಡಳಿ 167ನೇ ಸಾಮಾನ್ಯ ಸಭೆಯಲ್ಲಿ ವಿಶೇಷ ವಕೀಲ ಶುಲ್ಕವಾಗಿ ಒಟ್ಟು ರೂ.5,00,000/-ಗಳಿಗೆ ಬದಲಾಗಿ ರೂ.3,00,000/- (ಮೂರು ಲಕ್ಷ ರೂಪಾಯಿ ಮಾತ್ರ) ಗಳನ್ನು ಪಾವತಿಸುವುದು ಎಂಬುದಾಗಿ ತೀರ್ಮಾನಿಸಿದ್ದು, ಅದರಂತೆ ಈಗಾಗಲೇ Sri.K.S.Mahadeva Prasad ಇವರಿಗೆ ವಕೀಲ ಶುಲ್ಕವನ್ನು ಪಾವತಿಸಲಾಗಿರುತ್ತದೆ ಎಂಬ ಅಂಶವನ್ನು ಅವಗಾಹನೆಗೆ ತರಲಾಗಿದೆ.

ಅದರಂತೆ Sri.S.Nanda Kumar, ವಕೀಲರು, ಮೈಸೂರು ಇವರು ದಿನಾಂಕ: 20.02.2022ರ ಹುಂಡಿಯಲ್ಲಿ ಕೋರಿರುವ ವಕೀಲ ಶುಲ್ಕ ಮೊತ್ತ ರೂ.6,86,000/- (ಆರು ಲಕ್ಷದ ಎಂಬತ್ತಾರು ಸಾವಿರ ರೂಪಾಯಿ ಮಾತ್ರ)ಗಳನ್ನು ಪಾವತಿಸುವ ಬಗ್ಗೆ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ವಿಷಯವನ್ನು ಕೂಲಂಕಷವಾಗಿ ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು ಸಭೆಗೆ ಪ್ರಕರಣದ ಬಗ್ಗೆ ಮಾಹಿತಿಯನ್ನು ನೀಡಿದರು. ಪ್ರಕರಣದ ಬಗ್ಗೆ ಮಾಹಿತಿಯನ್ನು**

ಕುಲಪತಿಗಳು



ಕುಲಸಚಿವರು

ಪಡೆದ ಸಭೆಯು ಶ್ರೀ ಎಸ್. ನಂದಕುಮಾರ್, ವಕೀಲರು, ಇವರಿಗೆ ವಕೀಲ ಶುಲ್ಕವಾಗಿ ರೂ.ಒಂದು ಲಕ್ಷಗಳನ್ನು ಮಾತ್ರ ಪಾವತಿಸುವಂತೆ ನಿರ್ಣಯಿಸಿತು.

* * * * * * *

<u>ವಿಷಯ ಸಂಖ್ಯೆ : 168.07</u>

ವಿಷಯ: **Hon'ble 1st Additional Senior Civil Judge and CJM at Mysuru Order in Cr.No.42/2016 dated:31.03.2022** ರ ಬಗ್ಗೆ.

* * * * *

ವಿಶ್ವವಿದ್ಯಾನಿಲಯದಲ್ಲಿ ನಡೆದಿದೆ ಎನ್ನಲಾದ ವಿವಿಧ ಅಕ್ರಮಗಳಿಗೆ ಸಂಬಂಧಿಸಿದಂತೆ ಕಾನೂನು ಕ್ರಮ ಕೈಗೊಳ್ಳಲು ವಿ.ವಿ.ನಿಲಯವು ದಿನಾಂಕ: 19.08.2016ರಂದು ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ, ಮೈಸೂರು ಇಲ್ಲಿ ನೀಡಿದ್ದ ದೂರಿನ ಮೇರೆಗೆ ದಾಖಲಾದ Cr.No.42/2016ರ ಪ್ರಕರಣವು ಸದರಿ ಪೋಲಿಸ್ ಠಾಣೆಯವರಿಂದ ಹೆಚ್ಚಿನ ವಿಚಾರಣೆಗಾಗಿ Crime Investigation Department (CID), Bengaluru ಇವರಿಗೆ ವರ್ಗಾವಣೆಗೊಂಡಿತ್ತು. ಸದರಿ CID, Bengaluru ಇವರು ಪ್ರಕರಣದ ಬಗ್ಗೆ ತನಿಖೆ ಕೈಗೊಂಡು ನೀಡಿದ್ದ "B" Report ಅನ್ನು ಪ್ರಶ್ನಿಸಿ ವಿ.ವಿ.ನಿಲಯವು Hon'ble 1st Additional Senior Civil Judge and CJM at Mysuru ಇಲ್ಲಿ ಪ್ರಕರಣವನ್ನು ದಾಖಲಿಸಲಾಗಿತ್ತು.

ಸದರಿ ಪ್ರಕರಣವು ದಿನಾಂಕ: 31.03.2022ರಂದು ಕೆಳಕಂಡಂತೆ ಆದೇಶದೊಂದಿಗೆ ಇತ್ಯರ್ಥಗೊಂಡಿರುತ್ತದೆ.

> **The 'B' report filed by the investigation officer is rejected.**
>
> **Acting under Section 202 of Cr.P.C the investigation officer is directed to conduct fresh investigation by securing all the original documents from the complainant and file the report.**

ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶದಂತೆ ಮುಂದಿನ ಕಾನೂನು ಕ್ರಮಕೈಗೊಳ್ಳುವಂತೆ ಕೋರಿ ಜಯಲಕ್ಷ್ಮೀಪುರಂ ಪೋಲಿಸ್ ಠಾಣೆ, ಮೈಸೂರು ಇವರಿಗೆ ದಿನಾಂಕ: 16.04.2022ರಂದು ಪತ್ರ ಸಲ್ಲಿಸಲಾಗಿರುತ್ತದೆ. ಸದರಿ ಅಂಶವನ್ನು ವ್ಯವಸ್ಥಾಪನಾ ಮಂಡಳಿ ಸಭೆಯ ಅವಗಾಹನೆಗಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಪ್ರಕರಣದ ಬಗ್ಗೆ ಮಾನ್ಯ ಕುಲಪತಿಗಳು ಸಭೆಗೆ ಮಾಹಿತಿಯನ್ನು ವಿವರಿಸಿದರು. ಮಾಹಿತಿಯನ್ನು ಆಲಿಸಿದ ಸಭೆಯು, ಪ್ರಕರಣವನ್ನು ಮುಂದುವರೆಸುವಂತೆ ನಿರ್ಣಯಿಸಿತು.

* * * * * * *

<u>ವಿಷಯ ಸಂಖ್ಯೆ : 168.08</u>

ವಿಷಯ : ಶ್ರೀ ಶ್ರೀನಿವಾಸ ವಿ, ಡಿ.ಇ.ಓ. ಐ.ಟಿ. ವಿಭಾಗ, ಇವರ ಪತ್ನಿಯವರಾದ ಕವಿತ .ಡಿ ಯವರು ವೈದ್ಯಕೀಯ ವೆಚ್ಚದ ಮರುಭರಿಕೆ ಕುರಿತು.

* * * * *

ಕುಲಪತಿಗಳು



ಕುಲಸಚಿವರು

ಶ್ರೀ. ಶ್ರೀನಿವಾಸ ವಿ, ಡಿ.ಇ.ಓ. ಐ.ಟಿ. ವಿಭಾಗ, ಇವರ ಪತ್ನಿಯವರಾದ ಕವಿತ .ಡಿ ಯವರು Small Intestinal Fistulizing Crohn's Disease ನಿಂದಾಗಿ ಮಣಿಪಾಲ್ ಆಸ್ಪತ್ರೆ, ಮೈಸೂರು, ಇಲ್ಲಿ ಚಿಕಿತ್ಸೆ ಪಡೆದು ವೈದ್ಯಕೀಯ ವೆಚ್ಚದ ಮರಭರಿಕೆ ಹುಂಡಿಯ ಒಟ್ಟು ಮೊತ್ತ ರೂ.1,76,100/- (ರೂ. ಒಂದು ಲಕ್ಷದ ಎಪ್ಪತ್ತಾರು ಸಾವಿರದ ಒಂದುನೂರು ಮಾತ್ರ)ಗಳ ಮರುಭರಿಕೆಗಾಗಿ ದಿನಾಂಕ: 06.06.2022 ರಂದು ಅರ್ಜಿಸಲ್ಲಿಸಿರುತ್ತಾರೆ.

ಸದರಿ ಹುಂಡಿಗಳನ್ನು Karnataka Medical Attendance Rule (KMAR) ನಿಯಮ 1963ರ ಪ್ರಕಾರ Central Government Health Scheme (CGHS) ಬೆಂಗಳೂರು ದರಗಳ ಅನ್ವಯ ಪರಿಶೀಲಿಸಿದ ನಂತರ ಪಾವತಿಸಬೇಕಾಗಿರುವ ಒಟ್ಟು ಮೊತ್ತ ರೂ.1,17,580/- (ರೂ. ಒಂದು ಲಕ್ಷದ ಹದಿನೇಳು ಸಾವಿರದ ಐದುನೂರ ಎಂಭತ್ತು ಮಾತ್ರ) ಗಳನ್ನು ವಿವಿ ನಿಲಯದ ಪರಿನಿಯಮ 23(3)ರಲ್ಲಿ ವೈದ್ಯಕೀಯ ಮರುಭರಿಕೆ ವೆಚ್ಚವು ಪ್ರತಿ ನೌಕರನಿಗೆ ಒಂದು ಆರ್ಥಿಕ ವರ್ಷದಲ್ಲಿ ರೂ.1 ಲಕ್ಷ ಮೀರಿರಬಾರದು ಎಂದಿರುತ್ತದೆ. ಹಾಗೆಯೇ 23(5) ರಲ್ಲಿ "ಒಂದು ಆರ್ಥಿಕ ವರ್ಷದಲ್ಲಿ ವೈದ್ಯಕೀಯ ವೆಚ್ಚವು 1 ಲಕ್ಷ ಮೀರಿದ ಸಂದರ್ಭದಲ್ಲಿ ಮಾನ್ಯ ಕುಲಪತಿಗಳ ತೀರ್ಮಾನವನ್ನಾಧರಿಸಿ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯ ಮಂಡಿಸಬಹುದು ಎಂದಿರುತ್ತದೆ (ಪ್ರತಿ ಲಗತ್ತಿಸಿದೆ).

ಮೇಲ್ಕಂಡ ಅಂಶಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಗಮನಕ್ಕೆ ತರುತ್ತಾ, ಸದರಿ ನೌಕರರ ಪ್ರಸ್ತುತ ವೈದ್ಯಕೀಯ ಹುಂಡಿಯ ಒಟ್ಟು ಮೊತ್ತ ರೂ.1,17,580/- (ರೂ. ಒಂದು ಲಕ್ಷದ ಹದಿನೇಳು ಸಾವಿರದ ಐದುನೂರ ಎಂಭತ್ತು ಮಾತ್ರ)ಗಳನ್ನು ಪಾವತಿಸಲು ಹಾಗೂ 2022-23ನೇ ಸಾಲಿನ ಆರ್ಥಿಕ ವರ್ಷದಲ್ಲಿ ಮುಂದೆ ಬರಬಹುದಾದ ವೈದ್ಯಕೀಯ ವೆಚ್ಚ ಹುಂಡಿಯನ್ನು ಮರುಭರಿಕೆ ಮಾಡುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಹಾಗೂ ತೀರ್ಮಾನಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಪ್ರೊ. ಎಸ್. ಯಶಸ್ವಿನಿಯವರು ಮಾತನಾಡಿ, ವಿ.ವಿ.ನಿಲಯದಲ್ಲಿ ವೈದ್ಯಕೀಯ ವೆಚ್ಚವನ್ನು ಮರುಭರಿಕೆ ಮಾಡುವ ಬದಲು, ಗ್ರೂಪ್ ಇನ್ಸೂರೆನ್ಸ್ ಯೋಜನೆಯನ್ನು ಅನುಷ್ಠಾನಗೊಳಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಗ್ರೂಪ್ ಇನ್ಸೂರೆನ್ಸ್ ಯೋಜನೆ ಅಳವಡಿಸಿಕೊಂಡಲ್ಲಿ, ಪ್ರತಿ ನೌಕರರು ವರ್ಷ-ವರ್ಷ ಪ್ರೀಮಿಯಂ ಕಟ್ಟಬೇಕಾಗುತ್ತದೆಂದೂ, ಇದಕ್ಕೆ ಎಲ್ಲಾ ನೌಕರರು ಸಮ್ಮತಿಸಬೇಕಾಗುತ್ತದೆಂದು ಸಭೆಗೆ ತಿಳಿಸಿದರು. ಸದರಿ ವಿಷಯದ ಬಗ್ಗೆ ಸಾಕಷ್ಟು ಚರ್ಚೆಗಳನ್ನು ನಡೆಸಿ, ಸಾಧಕ-ಬಾಧಕಗಳನ್ನು ಅವಲೋಕಿಸಿದ ಸಭೆಯು, ಮುಂದೆ, ಮರುಭರಿಕೆ ಸಂಬಂಧ, ಪ್ರಸ್ತುತ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಪರಿನಿಯಮವನ್ನು ತಿದ್ದುಪಡಿ ಮಾಡಿ **KMAR** ನಿಯಮ 1963ರಲ್ಲಿ ಆಗಿಂದಾಗ್ಗೆ ಆಗಿರುವ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಕ್ರಮ ವಹಿಸಲು ತೀರ್ಮಾನಿಸಲಾಯಿತು ಹಾಗೂ ಶ್ರೀ ಶ್ರೀನಿವಾಸ.ವಿ., ಡಿ.ಇ.ಒ., ಐ.ಟಿ. ವಿಭಾಗ, ಇವರಿಗೆ ರೂ.1,17,580 ಗಳನ್ನು ಪಾವತಿಸಲು ತೀರ್ಮಾನಿಸಿತು.

* * * * * * *

<u>ವಿಷಯ ಸಂಖ್ಯೆ : 168.09</u>

ವಿಷಯ : ಯು.ಜಿ.ಸಿ. ನವದೆಹಲಿ, ವತಿಯಿಂದ ಮಂಜೂರಾಗಿದ್ದ ಅನುದಾನವನ್ನು **ICT Infrastructure** ಅಭಿವೃದ್ಧಿಪಡಿಸಲು ಉಪಯೋಗಿಸಿರುವ ಕ್ರಮಕ್ಕೆ ಅನುಮೋದನೆ ಕೋರಿ.

* * * * *

ಕುಲಪತಿಗಳು



ಕುಲಸಚಿವರು

ಯು.ಜಿ.ಸಿ. ನವದೆಹಲಿ, ಯಿಂದ ವಿವಿ ನಿಲಯಕ್ಕೆ "Assistance to IGNOU & SOUs with a view to its overall Strengthening and development of Course Materials, Development and Applications of New Technology, Development of MOOCs Computerization ICT and Quality Assurance Measures, Networking and Distance Education System etc., in Universities" ಎಂಬ ಶೀರ್ಷಿಕೆಯಡಿಯಲ್ಲಿ 2021-22ರ ಆರ್ಥಿಕ ವರ್ಷದಲ್ಲಿ ಉಪಯೋಗಿಸಿಕೊಳ್ಳಲು ರೂ.87,50,000/- (ರೂ. ಎಂಭತ್ತೇಳು ಲಕ್ಷದ ಐವತ್ತು ಸಾವಿರ ಮಾತ್ರ)ಗಳ ಅನುದಾನವನ್ನು ನೀಡಿ, ಈ ಮೊತ್ತವನ್ನು ಆರ್ಥಿಕ ವರ್ಷದಲ್ಲೇ (ದಿನಾಂಕ: 31.03.2022) ಉಪಯೋಗಿಸಿಕೊಳ್ಳುವಂತೆ ತಿಳಿಸಿ ದಿನಾಂಕ: 15.03.2022 ರಂದು ಕುಲಸಚಿವರಿಗೆ ಇ-ಮೇಲ್ ಮೂಲಕ ಪತ್ರ ರವಾನಿಸಿರುತ್ತಾರೆ (ಅನುಬಂಧ-1). ಮುಂದುವರೆದು, ಅನುದಾನದ ಬಳಕೆ ಬಗೆಗಿನ ಪ್ರಮಾಣ ಪತ್ರ (Utilization Certificate) ವನ್ನು ಸಲ್ಲಿಸುವಂತೆ ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ICT Infrastructure ಗೆ ಅವಶ್ಯವಿದ್ದ 81 ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಮಾನ್ಯ ಕುಲಪತಿಗಳ ಆದೇಶದಂತೆ ನಿಯಮಾನುಸಾರ ಒಂದಕ್ಕೆ ರೂ.1,07,970/- ರಂತೆ ಒಟ್ಟು ರೂ.87,45,570/- (ರೂ.ಎಂಭತ್ತೇಳು ಲಕ್ಷದ ನಲವತ್ತೈದು ಸಾವಿರದ ಐದುನೂರ ಎಪ್ಪತ್ತು ಮಾತ್ರ ಎಲ್ಲಾ ತೆರಿಗೆ ಸೇರಿ) ಗಳ ಮೌಲ್ಯದಲ್ಲಿ 4ಜಿ ನಿಯಮದಡಿ ಸರ್ಕಾರಿ ಸೌಮ್ಯ ಸಂಸ್ಥೆಯಾದ ಮೆ. ಕಿಯೋನಿಕ್ಸ್, ಬೆಂಗಳೂರು, ರವರಿಂದ ಖರೀದಿಸಲಾಗಿರುತ್ತದೆ.

ಯು.ಜಿ.ಸಿ. ನವದೆಹಲಿ, ರವರು 2021-22ನೇ ಸಾಲಿಗೆ ಬಿಡುಗಡೆ ಮಾಡಿದ್ದ ಅನುದಾನದ ಮೊತ್ತವನ್ನು ನಿಗದಿತ ದಿನಾಂಕ: 31.03.2022 ರೊಳಗಾಗಿ ಉಪಯೋಗಿಸಿಕೊಳ್ಳಬೇಕಾಗಿದ್ದ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ ವ್ಯವಸ್ಥಾಪನಾ ಮಂಡಳಿ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ ಮೆ. ಕಿಯೋನಿಕ್ಸ್, ಬೆಂಗಳೂರು, ರವರಿಂದ 81 ಡೆಲ್ ಕಂಪನಿಯ ಡೆಸ್ಕ್‌ಟಾಪ್ ಕಂಪ್ಯೂಟರ್‌ಗಳನ್ನು ಖರೀದಿಸಿ ಹುಂಡಿ ಪಾವತಿಸಲಾಗಿರುವ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಘಟನ್ನೋತ್ತರ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಪ್ರೊ. ಎಸ್. ಯಶಸ್ವಿನಿಯವರು ಮಾನ್ಯ ಕುಲಪತಿಗಳಿಂದ ತಮಗೆ ಅಗತ್ಯವೆನಿಸಿದ ಮಾಹಿತಿಗಳನ್ನು ಪಡೆದುಕೊಂಡರು. ನಂತರ ಮಾತನಾಡಿದ ಅವರು, ಡೆಸ್ಕ್ ಟಾಪ್ ಕಂಪ್ಯೂಟರ್‌ಗಳನ್ನು ಟೆಂಡರ್ ಪ್ರಕ್ರಿಯೆ ಮೂಲಕ ಖರೀದಿಸಬಹುದಾಗಿತ್ತು ಎಂದು ಅಭಿಪ್ರಾಯಪಟ್ಟರು. ಇದಕ್ಕೆ ಪ್ರತಿಕ್ರಿಯಿಸಿ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀ ಎಲ್. ನಾಗೇಂದ್ರರವರು ಕೂಡ ಅದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಇದಕ್ಕೆ ನನ್ನ ಆಕ್ಷೇಪಣೆ ಇದೆ ಎಂದು ಸಭೆಗೆ ತಿಳಿಸಿದರು. ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಕಿಯೋನಿಕ್ಸ್ ಸಂಸ್ಥೆಯವರನ್ನು ಬಿಟ್ಟರೆ, ಬೇರೆ ಸಂಸ್ಥೆಯವರಿಗೆ 4ಜಿ ವಿನಾಯಿತಿ ಇರುವುದಿಲ್ಲ. ಹಾಗಾಗಿ, ಕಿಯೋನಿಕ್ಸ್ ಸಂಸ್ಥೆಯವರಿಂದ ಖರೀದಿ ಮಾಡಿದ್ದು, ಇನ್ನು ಮುಂದೆ, ಇಂತಹ ಕೆಲಸಗಳನ್ನು ಟೆಂಡರ್ ಕರೆದು ನಿರ್ವಹಿಸಲಾಗುವುದೆಂದು ಸಭೆಗೆ ತಿಳಿಸಿದರು.

* * * * * * *

<u>ವಿಷಯ ಸಂಖ್ಯೆ : 168.10</u>

ವಿಷಯ : ವಿಶ್ವವಿದ್ಯಾನಿಲಯಕ್ಕೆ ಮೆ. ನೊವೆಲ್ ಸೆಕ್ಯೋರಿಟಿ ಸರ್ವೀಸ್, ಬೆಂಗಳೂರು, ಇವರಿಂದ ತಾತ್ಕಾಲಿಕವಾಗಿ ಭದ್ರತಾ ಸಿಬ್ಬಂದಿ ಸೇವೆ ಪಡೆದಿರುವ ಸಂಬಂಧ ಅನುಸಮರ್ಥನೆಗೆ ವಿಷಯ ಮಂಡಿಸುವ ಬಗ್ಗೆ.

* * * * *

ಕುಲಪತಿಗಳು

ಕುಲಸಚಿವರು

ವಿಶ್ವವಿದ್ಯಾನಿಲಯಕ್ಕೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸುವ ಸಂಬಂಧ 2020-21ನೇ ಸಾಲಿಗೆ ವಿವಿಧ ವಿಭಾಗಗಳ ಮತ್ತು ಪ್ರಾದೇಶಿಕ ಕೇಂದ್ರಗಳಿಗೆ ಭದ್ರತಾ ಸಿಬ್ಬಂದಿ ಸೇವೆ ಪಡೆಯಲು ಟೆಂಡರ್ ಮೂಲಕ ದಿನಾಂಕ: 20.08.2020 ರಿಂದ 19.08.2021 ರ ವರೆಗೆ ಮೆ. ಶ್ರೀ ರಂಗನಾಥ ಎಂಟರ್ ಪ್ರೈಸಸ್ಸ್ ಮೈಸೂರು ಇವರಿಗೆ ಒಟ್ಟು 95+1 ಸಿಬ್ಬಂದಿ ಸೇವೆ ಪಡೆಯಲು ಕಾರ್ಯದೇಶ ನೀಡಲಾಗಿತ್ತು.

ಮಾನ್ಯ ಕುಲಪತಿಗಳು ದಿನಾಂಕ: 20.08.2021ರಿಂದ 19.11.2021 ರವರೆಗೆ (03) ಮೂರು ತಿಂಗಳ ಅವಧಿಗೆ ಮೆ ಶ್ರೀ ರಂಗನಾಥ ಎಂಟರ್‌ಪ್ರೈಸಸ್ಸ್ ಮೈಸೂರು ಇವರಿಗೆ ಮುಂದುವರಿಸುವಂತೆ ಆದೇಶಿಸಿರುತ್ತಾರೆ. ಅದರಂತೆ ಕಾರ್ಯದೇಶ ನೀಡಲಾಗಿರುತ್ತದೆ.

ಹಾಗೆಯೇ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾವಣೆ ವೇಳಾಪಟ್ಟಿ ಪ್ರಕಟಿಸಿದ್ದರಿಂದ ಚುನಾವಣಾ ಸಂಹಿತೆ ಜಾರಿ ಇದ್ದುದರಿಂದ ದಿನಾಂಕ: 20.11.2021 ರಿಂದ 19.12.2021ರವರೆಗೆ ಒಂದು ತಿಂಗಳ ಅವಧಿಗೆ ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸದರಿಯವರನ್ನೆ ಮುಂದುವರೆಸಲು ಕಾರ್ಯಾದೇಶ ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯಕ್ಕೆ ಹೊಸದಾಗಿ ಭದ್ರತಾ ಸಿಬ್ಬಂದಿ ಸೇವೆ ಪಡೆಯುವ ಸಂಬಂಧ ದಿನಾಂಕ:17.12.2021ರಂದು e-procurement portal ಮೂಲಕ ಟೆಂಡರ್ ಆಹ್ವಾನಿಸಲಾಗಿತ್ತು. ಟೆಂಡರ್ ಪ್ರಕ್ರಿಯೆ ನಡೆಯುವ ಸಮಯದಲ್ಲಿ M/s Surabhi Enterprises Chithradurga ಇವರು ವಿಶ್ವವಿದ್ಯಾನಿಲಯದ ವಿರುದ್ಧವಾಗಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಟೆಂಡರ್‌ಗೆ ಸಂಬಂಧಿಸಿದಂತೆ WP.NO. 204/2022ರ ಪ್ರಕರಣ ದಾಖಲಿಸಿರುವುದರಿಂದ ಮಾನ್ಯ ಉಚ್ಚ ನ್ಯಾಯಲಯವು ನೀಡಿದ ಮಧ್ಯಂತರ ಆದೇಶದಂತೆ ಸದರಿ ಟೆಂಡರ್ ಪ್ರಕ್ರೀಯೆಯನ್ನು ರದ್ದುಗೊಳಿಸಲಾಗಿತ್ತು. ಟೆಂಡರ್ ಪ್ರಕ್ರಿಯೇ ವಿಳಂಭವಾದ ಕಾರಣದಿಂದ ವಿಶ್ವವಿದ್ಯಾನಿಲಯದ ಭದ್ರತೆ ಹಾಗೂ ಚರ/ಸ್ಥಿರ ಆಸ್ತಿಗಳ ಸಂರಕ್ಷಣೆಯ ದೃಷ್ಟಿಯಿಂದ ಮೆ. ಶ್ರೀರಂಗನಾಥ ಎಂಟರ್ ಪ್ರೈಸಸ್ಸ್, ಮೈಸೂರು ಇವರನ್ನು ದಿನಾಂಕ: 20.12.2021 ರಿಂದ 19.01.2022, ದಿನಾಂಕ: 20.01.2022 ರಿಂದ 19.02.2022, ದಿನಾಂಕ:20.02.2022 ರಿಂದ 19.03.2022 ದಿನಾಂಕ:20.03.2022 ರಿಂದ 19.04.2022 ರವರಗೆ ಮಾನ್ಯ ಕುಲಪತಿಗಳ ಆದೇಶ ಮೇರೆಗೆ ಮುಂದುವರಿಸಲಾಗಿತ್ತು.

ದಿನಾಂಕ: 19.04.2022ಕ್ಕೆ ಶ್ರೀ ರಂಗನಾಥಎಂಟರ್ ಪ್ರೈಸಸ್ ಮೈಸೂರು, ಇವರ ಭದ್ರತಾ ಸಿಬ್ಬಂದಿ ಸೇವೆಯನ್ನು ಮುಕ್ತಾಯಗೊಳಿಸಿ ಆದೇಶ ಹೊರಡಿಸಲಾಗಿದೆ. ಮೆ. ನೋವೆಲ್ ಸೆಕ್ಯೋರಿಟಿ ಸರ್ವೀಸಸ್ ಬೆಂಗಳೂರು ಇವರಿಂದ ಒಟ್ಟು ಸೂಪರ್‌ವೈಸರ್ 76 ಸೆಕ್ಯೂರಿಟಿಗಾರ್ಡ್ ಸೇರಿಒಟ್ಟು 77 (ಮೂರು ಪಾಳಿ) ಭದ್ರತಾ ಸಿಬ್ಬಂದಿ ಸೇವೆಯನ್ನು ತಾತ್ಕಾಲಿಕವಾಗಿ ಪಡೆಯುವಂತೆ ಕಡತದಲ್ಲಿ ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ, ಹೊಸ ಟೆಂಡರ್ ಪ್ರಕ್ರೀಯೆ ಮುಗಿಯುವರೆಗೆ ಮೆ. ನೋವೆಲ್ ಸೆಕ್ಯೋರಿಟಿ ಸರ್ವೀಸಸ್, ಬೆಂಗಳೂರು ಇವರಿಗೆ ಭದ್ರತಾ ಸಿಬ್ಬಂದಿ ಸೇವೆ ಒದಗಿಸಲು ನೀಡಿರುವ ಆದೇಶಕ್ಕೆ ವ್ಯವಸ್ಥಾಪನ ಮಂಡಳಿ ಸಭೆಯ ಅವಗಾಹನೆಗೆ ಹಾಗೂ ಅನುಸಮರ್ಥನೆಗಾಗಿ ಮಂಡಿಸಿದೆ.

<u>ತೀರ್ಮಾನ</u> :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯ ಕುರಿತು ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

ಕುಲಪತಿಗಳು



ಕುಲಸಚಿವರು

ವಿಷಯ ಸಂಖ್ಯೆ : 168.11

ವಿಷಯ : ವಿಶ್ವವಿದ್ಯಾನಿಲಯದ ಖಾಯಂ ಮಹಿಳಾ ಬೋಧಕ ಹಾಗೂ ಬೋಧಕೇತರ ನೌಕರರುಗಳಿಗೆ ಸರ್ಕಾರದ ಆದೇಶದ ಪ್ರಕಾರ ಶಿಶುಪಾಲನಾ ರಜೆಯನ್ನು ಜಾರಿಗೊಳಿಸಿರುವ ಸಂಬಂಧ ಅನುಸಮರ್ಥನೆ ಕೋರಿರುವ ಬಗೆಗೆ.

* * * * *

ಪ್ರಸಕ್ತ ಸರ್ಕಾರವು 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-37ರಲ್ಲಿ ರಾಜ್ಯ ಸರ್ಕಾರದ ಮಹಿಳಾ ನೌಕರರಿಗೆ ಚಾಲ್ತಿಯಲ್ಲಿರುವ ಪ್ರಸೂತಿ ರಜೆಯೊಂದಿಗೆ ಒಟ್ಟು ಸೇವಾವಧಿಯಲ್ಲಿ ಆರು ತಿಂಗಳವರೆಗೆ ಅಂದರೆ 180 ದಿನಗಳ ಶಿಶುಪಾಲನಾ ರಜೆಯನ್ನು ಘೋಷಿಸಿದ್ದು, ಈ ಸಂಬಂಧ ಕರ್ನಾಟಕ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಸರ್ಕಾರಿ ಮಹಿಳಾ ನೌಕರರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಆಇ 4(ಇ) ಸೇನಿಸೇ 2021 ಬೆಂಗಳೂರು, ದಿನಾಂಕ:21.06.2021 ರಲ್ಲಿನ ಷರತ್ತಿಗೊಳಪಟ್ಟು ಶಿಶುಪಾಲನಾ ರಜೆಯನ್ನು ಮಂಜೂರು ಮಾಡಿ ಆದೇಶಿಸಿರುತ್ತದೆ. (ಪ್ರತಿ ಲಗತ್ತಿಸಿದೆ)

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ಮಹಿಳಾ ಬೋಧಕ/ ಬೋಧಕೇತರ ನೌಕರುರುಗಳಿಗೆ ಸರ್ಕಾರದ ಆದೇಶ ದಿನಾಂಕ:21.06.2021ರಲ್ಲಿನ ಷರತ್ತಿಗೊಳಪಟ್ಟು ಇಡೀ ಸೇವಾವಧಿಯಲ್ಲಿ ಗರಿಷ್ಠ ಆರು ತಿಂಗಳವರೆಗೆ ಅಂದರೆ, 180 ದಿನಗಳ ಶಿಶುಪಾಲನಾ ರಜೆಯನ್ನು ಪಡೆಯಬಹುದಾಗಿದ್ದು, ರಜೆ ಮಂಜೂರಾತಿಯು ಕನಿಷ್ಠ 15 ದಿನಗಳಿಗಿಂತ ಕಡಿಮೆ ಇರಬಾರದು ಮತ್ತು ಅತ್ಯಂತ ಕಿರಿಯ ಮಗುವು 18 ವರ್ಷ ತಲುಪುವವರೆಗಿನ ಅವಧಿಗೆ ಮಾತ್ರ ಶಿಶುಪಾಲನಾ ರಜೆ ಸೌಲಭ್ಯವನ್ನು ಮಂಜೂರು ಮಾಡುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಸರ್ಕಾರದ ಆದೇಶವನ್ನು ಯಥಾವತ್ತಾಗಿ ಅಳವಡಿಸಿಕೊಂಡು ಅಧಿಸೂಚಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯವು ಹೊರಡಿಸಿರುವ ಅಧಿಸೂಚನೆ ಪ್ರಕ್ರಿಯೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆ ಕೋರಿ ವಿಷಯವನ್ನು ಮಂಡಿಸಿದೆ.

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯ ಕುರಿತು ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.

* * * * * * *

ವಿಷಯ ಸಂಖ್ಯೆ : 168.12

ವಿಷಯ : ವಿಶ್ವವಿದ್ಯಾನಿಲಯದ ಡೀನ್ (ಅಧ್ಯಯನ ಕೇಂದ್ರಗಳು) ಹುದ್ದೆಗೆ ನೇಮಕಗೊಂಡಿರುವುದನ್ನು ಅನುಸಮರ್ಥನೆ ಕೋರಿ.

* * * * *

ವಿಶ್ವವಿದ್ಯಾನಿಲಯದ ಹುದ್ದೆಗಳಲ್ಲೊಂದಾದ ಡೀನ್(ಅಧ್ಯಯನ ಕೇಂದ್ರ) ಹುದ್ದೆಯಲ್ಲಿ ಡಾ. ಷಣ್ಮುಖ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರ್ತವ್ಯ ನಿರ್ವಹಿಸುತ್ತಿದ್ದು, ಇವರು ದಿನಾಂಕ:30.06.2022 ರಂದು ತಮ್ಮ 62 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿ, ವಯೋನಿವೃತ್ತಿ ಅಧಾರದ ಮೇಲೆ ನಿವೃತ್ತಿ ಹೊಂದಲಿದ್ದಾರೆ.

ಕುಲಪತಿಗಳು　　　　ಕುಲಸಚಿವರು

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಸುಸೂತ್ರ ಆಡಳಿತದ ನಿರ್ವಹಣೆಯ ಹಿತದೃಷ್ಟಿಯಿಂದ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-1/87/2022-23, ದಿನಾಂಕ: 01.06.2022ರನ್ವಯ ಡಾ. ಷಣ್ಮುಖರವನ್ನು ಮಾತೃ ವಿಭಾಗಕ್ಕೆ ಮರುನಿಯಕ್ತಿಗೊಳಿಸಿ, ಡಾ. ಎಂ. ರಾಮನಾಥಂನಾಯ್ಡು, ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ತೆಲುಗು ಅಧ್ಯಯನ ವಿಭಾಗ, ಕರಾಮುವಿ, ಇವರನ್ನು ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಡೀನ್(ಅಧ್ಯಯನ ಕೇಂದ್ರ)ರನ್ನಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿರುತ್ತದೆ. ಡಾ. ಎಂ. ರಾಮನಾಥಂ ನಾಯ್ಡು ರವರು ದಿನಾಂಕ: 02.06.2022ರಂದು ಡೀನ್(ಅಧ್ಯಯನ ಕೇಂದ್ರ)ರಾಗಿ ಕರ್ತವ್ಯದ ಮೇಲೆ ವರದಿ ಮಾಡಿಕೊಂಡಿರುತ್ತಾರೆ.

ಕರಾಮುವಿ ಕಾಯ್ದೆಯ ಎರಡನೇ ಅನುಸೂಚಿಯ ಮೊದಲನೇ ಪರಿನಿಯಮದ ನಿಯಮ 4(1)ರನ್ವಯ

(1) ವ್ಯವಸ್ಥಾಪನಾ ಮಂಡಳಿಯು ಪ್ರತಿಯೊಬ್ಬ ಡೀನರನ್ನು –

(i) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ಈಗಾಗಲೇ ವಿಶ್ವವಿದ್ಯಾನಿಲಯದಲ್ಲಿ ಉಪಾಧ್ಯಾಯ ನಾಗಿದ್ದರೆ, ಉಪಕುಲಪತಿಯವರ; ಮತ್ತು

(ii) ನೇಮಕಗೊಳ್ಳಬೇಕಾದ ಅಭ್ಯರ್ಥಿಯು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಡದವನಾಗಿದ್ದರೆ; ಈ ಉದ್ದೇಶಕ್ಕಾಗಿ ರಚಿತವಾಗಿ ಆಯ್ಕೆ ಸಮಿತಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು;

ಪರಂತು, ಡೀನರ ಪೈಕಿ ಒಬ್ಬರು ಉಪಾಧ್ಯಾಯರ ಆಡಳಿತಾತ್ಮಕ ವ್ಯವಹಾರಗಳ ಪ್ರಭಾರದಲ್ಲಿ ತರತಕ್ಕದ್ದು ಎಂದಿರುತ್ತದೆ.

ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ ವ್ಯವಸ್ಥಾಪನಾ ಮಂಡಳಿ ಸಭೆಗೆ ವಿಷಯವನ್ನು ಮಂಡಿಸಿದೆ.

<u>ತೀರ್ಮಾನ</u> :

**ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಈ ವಿಷಯ ಕುರಿತು ವಿ.ವಿ.ನಿಲಯವು ಕೈಗೊಂಡಿರುವ ಕ್ರಮವನ್ನು ಅನುಸಮರ್ಥಿಸಿತು.**

* * * * * * *

<u>ವಿಷಯ ಸಂಖ್ಯೆ : 168.13</u>

**ವಿಷಯ : ದಿನಾಂಕ: 01.04.2006ರ ನಂತರ ವಿ.ವಿ. ನಿಲಯದ ಸೇವೆಗೆ ನೇಮಕ ಹೊಂದಿ ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (NPS) ಕಾರ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ.**

**ಉಲ್ಲೇಖ:** 1. ಈ ಕಛೇರಿ ಪತ್ರ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/279/2021-22 ದಿನಾಂಕ:04.02.2022.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 10 ಯುಎನ್ಇ 2022, ದಿನಾಂಕ: 21.02.2022.
3. ಈ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/779/2021-22 ದಿನಾಂಕ: 16.03.2022.
4. ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/264/2021, ಬೆಂಗಳೂರು, ದಿನಾಂಕ: 30.05.2022.

* * * * *

ಕುಲಪತಿಗಳು

ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2006ರ ನಂತರ ನೇಮಕ ಹೊಂದಿ ಸೇವೆ ಸಲ್ಲಿಸುತ್ತಿರುವ ನೌಕರರುಗಳಿಗೆ ಹೊಸ ಪಿಂಚಣಿ ಯೋಜನೆಯನ್ನು ಮರಣ ಹೊಂದಿದ ನೌಕರರ ಅವಲಂಬಿತರಿಗೆ ಕುಟುಂಬ ಪಿಂಚಣಿ, ಉಪದಾನ ಹಾಗೂ ನಿವೃತ್ತಿ ಹೊಂದಿರುವ ನೌಕರರಿಗೆ ಉಪದಾನ, ಗಳಿಕೆ ರಜೆ ನಗಧೀಕರಣ ಹಾಗೂ ಇತರೆ ಎನ್.ಪಿ.ಎಸ್ ಸೌಲಭ್ಯಗಳನ್ನು ಜರೂರಾಗಿ ಪಾವತಿ ಮಾಡಬೇಕಾಗಿರುತ್ತದೆ. ಮೃತ ನೌಕರರ ಕುಟುಂಬದವರು ಆರ್ಥಿಕ ಸೌಲಭ್ಯಗಳಿಗೆ ಒತ್ತಾಯಿಸುತ್ತಿರುವುದರಿಂದ ಹಾಗೂ ವಯೋ ನಿವೃತ್ತಿ ಹೊಂದುವ ಉದ್ಯೋಗಿಗಳಿಗೆ ಸೌಲಭ್ಯಗಳನ್ನು ಇತ್ಯರ್ಥಗೊಳಿಸುವ ಬಗ್ಗೆ ಜರೂರಾಗಿ ಕ್ರಮವಹಿಸಬೇಕಾಗಿರುತ್ತದೆ. ಈ ಸಂಬಂಧ ಸೂಕ್ತ ಮಾರ್ಗದರ್ಶನಕ್ಕಾಗಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ ಇಲಾಖೆ), ಬೆಂಗಳೂರು, ರವರಿಗೆ ಉಲ್ಲೇಖಿತ (1)ರ ಪತ್ರ ಬರೆಯಲಾಗಿತ್ತು.

ಮುಂದುವರೆದು, ವಿಶ್ವವಿದ್ಯಾನಿಲಯವು ತನ್ನ ಸ್ವಂತ ಸಂಪನ್ಮೂಲಗಳಿಂದ ಭರಿಸಿಕೊಳ್ಳುವ ಷರತ್ತಿನೊಂದಿಗೆ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018, ದಿನಾಂಕ: 23.06.2018ರನ್ವಯ ನಿಯಮಾನುಸಾರ ನಿವೃತ್ತಿ, ಉಪಧನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯವನ್ನು ಅಳವಡಿಸಿಕೊಳ್ಳಬಹುದೆಂದು ಉಲ್ಲೇಖಿತ (2)ರ ಪತ್ರದಲ್ಲಿ ತಿಳಿಸಲಾಗಿರುತ್ತದೆ. ಸದರಿ ಪತ್ರದ ಅನುಸಾರ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಅನುಮೋದನೆಯನ್ನು ಕಾಯ್ದಿರಿಸಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ದಿನಾಂಕ: 01.04.2018ರಿಂದ ಜಾರಿಗೆ ಬಂದಂತೆ ವಿ.ವಿ ನಿಲಯದ ಬೋಧಕ ಹಾಗೂ ಬೋಧಕೇತರ ವಿವಿಧ ವರ್ಗದ ನೌಕರರಿಗೆ ವಿಸ್ತರಿಸಿ ಉಲ್ಲೇಖ(3)ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಪ್ರಕ್ರಿಯೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಸಮರ್ಥನೆಗಾಗಿ ಮಂಡಿಸಿದೆ.

ಮುಂದುವರಿದಂತೆ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/264/2021, ಬೆಂಗಳೂರು, ದಿನಾಂಕ: 30.05.2022ರ ಆದೇಶದಲ್ಲಿ ದಿನಾಂಕ: 01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ಎನ್.ಪಿ.ಎಸ್ ನೌಕರರ ನಾಮನಿರ್ದೇಶಿತರ ಆಯ್ಕೆಯ ಮೇರೆಗೆ ಕುಟುಂಬ ಪಿಂಚಣಿ ಮಂಜೂರು ಮಾಡುವ ಸಂದರ್ಭದಲ್ಲಿ ನೌಕರರ ವಂತಿಕೆ ಮತ್ತು ಅದರ ಮೇಲಿನ ಆದಾಯವನ್ನು ಮೃತರ ನಾಮನಿರ್ದೇಶಿತರಿಗೆ ಇತ್ಯರ್ಥಮಾಡುವ ಸಂಬಂಧ ಆದೇಶ ಹೊರಡಿಸಲಾಗಿದ್ದು, ಸದರಿ ಆದೇಶವನ್ನು ಸಹ ಯಥವತ್ತಾಗಿ ಅಳವಡಿಸಿಕೊಂಡು ವಿ.ವಿಯ ಬೋಧಕ/ಬೋಧಕೇತರ ಸಿಬ್ಬಂದಿವರ್ಗದವರಿಗೆ ವಿಸ್ತರಿಸುವ ಸಂಬಂಧ ವಿಷಯವನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

<u>ತೀರ್ಮಾನ</u> :

**ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಮಾನ್ಯ ಕುಲಪತಿಗಳು, NPS ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ವರ್ಗದವರಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸುವ ಬಗ್ಗೆ ಸಭೆಯ ಗಮನಕ್ಕೆ ತಂದರು. ಸದರಿ ವಿಷಯದ ಬಗ್ಗೆ ಸಭೆಗೆ ಪೂರ್ಣ ಮಾಹಿತಿಯ ಅವಶ್ಯಕತೆ ಇದೆ ಎಂದು ತಿಳಿಸಿದ ಹಿನ್ನೆಲೆಯಲ್ಲಿ, ಮಾನ್ಯ ಕುಲಪತಿಗಳು ಸಭೆಯ ಒಪ್ಪಿಗೆಯನ್ನು ಪಡೆದು, ವಿ.ವಿ.ನಿಲಯದ ಹಣಕಾಸು ಅಧಿಕಾರಿಗಳನ್ನು ಸಭೆಗೆ ಆಹ್ವಾನಿಸಿದರು. ಹಣಕಾಸು ಅಧಿಕಾರಿಗಳು ಸಭೆಗೆ ಆಗಮಿಸಿ, ವಿ.ವಿ.ನಿಲಯವು ಈಗಾಗಲೇ ಎನ್.ಪಿ.ಎಸ್. ಸೌಲಭ್ಯವನ್ನು ವಿಸ್ತರಿಸಿರುವುದರಿಂದ, ವಿ.ವಿ.ನಿಲಯಕ್ಕೆ ಆರ್ಥಿಕ ಹೊರೆಯಾಗುತ್ತಿದೆ. ಇದರೊಂದಿಗೆ ನಿವೃತ್ತಿ ಉಪದಾನ, ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯಗಳನ್ನು ವಿಸ್ತರಿಸಿದಲ್ಲಿ, ವಿ.ವಿ.ನಿಲಯಕ್ಕೆ ಇದು ಖಂಡಿತವಾಗಿಯೂ ಹೆಚ್ಚಿನ ಆರ್ಥಿಕ**

ಕುಲಪತಿಗಳು



ಕುಲಸಚಿವರು

ಹೊರೆಯಾಗುತ್ತದೆ. ಕಾರಣ, ವಿಶ್ವವಿದ್ಯಾನಿಲಯವು ತನ್ನ ಸ್ವಂತ ಸಂಪನ್ಮೂಲಗಳಿಂದ ಈ ವೆಚ್ಚವನ್ನು ಭರಿಸಬೇಕಾಗುತ್ತದೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮಾನ್ಯ ಸದಸ್ಯರಾದ ಶ್ರೀ ಎನ್. ಕೃಷ್ಣೇಗೌಡ ಇವರು ಮಾತನಾಡಿ, ಮೇಲೆ ತಿಳಿಸಿರುವ ಸೌಲಭ್ಯಗಳನ್ನು ನೀಡುವುದಾದಲ್ಲಿ, ವಿ.ವಿ.ನಿಲಯಕ್ಕೆ ತಗುಲುವ ಆರ್ಥಿಕ ಹೊರೆ ಬಗ್ಗೆ ಅಂದಾಜು ಮೊತ್ತವನ್ನು ಕಂಡುಹಿಡಿದು, ಸಭೆಗೆ ವರದಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಸಲಹೆ ನೀಡಿದರು. ಮಾನ್ಯ ಸದಸ್ಯರಾದ ಡಾ. ಆರ್.ಎಚ್. ಅಕಮಂಚಿಯವರು ಮಾತನಾಡಿ, ವಿ.ವಿ.ನಿಲಯಕ್ಕೆ ಆರ್ಥಿಕ ಹೊರೆಯಾಗುವುದು ನೈಜ ಸಂಗತಿಯಾದರೂ, ವಿ.ವಿ.ನಿಲಯದ ನೌಕರರ ಭವಿಷ್ಯ ಕುರಿತು ಆಲೋಚಿಸಿ, ತೀರ್ಮಾನ ತೆಗೆದುಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಒಟ್ಟಾರೆ ಇದೊಂದು ಗಂಭೀರವಾದ ವಿಷಯವಾಗಿರುವುದರಿಂದ, ಒಂದು ಸಮಿತಿಯನ್ನು ರಚಿಸಿ, **financial commitment** ಬಗ್ಗೆ **work-out** ಮಾಡಿ, ಸಮಿತಿಯು ಸಲ್ಲಿಸುವ ವರದಿಯ ಆಧಾರದ ಮೇಲೆ ಸೂಕ್ತ ನಿರ್ಣಯ ತೆಗೆದುಕೊಳ್ಳಲಾಗುವುದೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು.

* * * * * * *

<u>ವಿಷಯ ಸಂಖ್ಯೆ : 168.14</u>

ವಿಷಯ : 59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಅನುಮೋದಿಸುವ ಕುರಿತು.

* * * * *

ದಿನಾಂಕ: 20.05.2022ರಂದು ನಡೆದ 59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ನಡವಳಿಯನ್ನು ಮುಂದಿನ ವ್ಯವಸ್ಥಾಪನಾ ಮಂಡಳಿ ವಿಶೇಷ ಸಭೆಯಲ್ಲಿ ಮಂಡಿಸಲು ಕೋರಿರುವುದರಿಂದ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

<u>ತೀರ್ಮಾನ</u> :

59ನೇ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.

* * * * * * *

<u>ವಿಷಯ ಸಂಖ್ಯೆ : 168.15</u>

ವಿಷಯ : 2021-22ರ ಜನವರಿ ಆವೃತ್ತಿಯ ಪ್ರವೇಶಾತಿಯಲ್ಲಿ ಜಾಹೀರಾತು ವೆಚ್ಚ ಭರಿಸಿರುವ ಕ್ರಮಕ್ಕೆ ಅನುಸಮರ್ಥನೆ ಕೋರಿ.

* * * * *

2021-22ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಯುಜಿ ವರ್ಗದಲ್ಲಿ 09 ಶಿಕ್ಷಣಕ್ರಮಗಳು, ಪಿಜಿ ವರ್ಗದಲ್ಲಿ 32 ಶಿಕ್ಷಣಕ್ರಮಗಳು, ಪಿಜಿ ಸರ್ಟಿಫಿಕೇಟ್‌ನ 13 ಶಿಕ್ಷಣಕ್ರಮಗಳು, ಡಿಪ್ಲೋಮಾ ವರ್ಗದಲ್ಲಿ 5 ಶಿಕ್ಷಣಕ್ರಮಗಳು ಹಾಗೂ ಯುಜಿ ಸರ್ಟಿಫಿಕೇಟ್ ವರ್ಗದಲ್ಲಿ 3 ಶಿಕ್ಷಣಕ್ರಮಗಳಿಗೆ (ಒಟ್ಟಾರೆ 62 ಶಿಕ್ಷಣಕ್ರಮಗಳು) ಕೇಂದ್ರ ಕಚೇರಿಯೂ ಒಳಗೊಂಡಂತೆ 24 ಪ್ರಾದೇಶಿಕ ಕೇಂದ್ರಗಳಲ್ಲಿ ಹಾಗೂ ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ಪ್ರವೇಶಾತಿಯನ್ನು ಮಾಡಲಾಗಿ ಒಟ್ಟಾರೆ 6124 ವಿದ್ಯಾರ್ಥಿಗಳು ವಿವಿಧ ಶಿಕ್ಷಣಕ್ರಮಗಳಿಗೆ ಪ್ರವೇಶಾತಿಯನ್ನು ಹೊಂದಿರುತ್ತಾರೆ.

ಕುಲಪತಿಗಳು ಕುಲಸಚಿವರು

ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಹಾಗೂ ಆಸಕ್ತರನ್ನು ತಲಪುವ ನಿಟ್ಟಿನಿಂದ ಒಟ್ಟಾರೆ 15 ದಿನಪತ್ರಿಕೆಗಳ ಮೂಲಕ ವಿವಿಧ ದಿನಾಂಕಗಳಲ್ಲಿ ಕನ್ನಡ ಮತ್ತು ಆಂಗ್ಲ ಮಾಧ್ಯಮದಲ್ಲಿ ಜಿಲ್ಲಾ ಮತ್ತು ರಾಜ್ಯ ಆವೃತ್ತಿಯಲ್ಲಿ ಸರ್ಕಾರದ ಡಿಐಪಿ ದರದಲ್ಲಿ ಜಾಹೀರಾತನ್ನು ಸರ್ಕಾರದಿಂದ ಗುರುತಿಸಲ್ಪಟ್ಟ ಮೆ: ಅವಾಂತಿ ಅಡ್ವಟೈಸರ್ಸ್, ಬೆಂಗಳೂರು ಇವರ ಮೂಲಕ ನೀಡಲಾಗಿ ಒಟ್ಟಾರೆ 24,02,242/- ವೆಚ್ಚವಾಗಿರುತ್ತದೆ.

ಹಾಗೆಯೇ, 8 ವಿವಿಧ ಕನ್ನಡ ನ್ಯೂಸ್ ಚಾನಲ್‌ಗಳ ಮೂಲಕ ಬ್ಯಾನರ್ ವಿತ್ ವಾಯ್ಸ್‌ಓವರ್ ಜಾಹೀರಾತನ್ನು ವಿವಿಧ ದಿನಾಂಕಗಳಲ್ಲಿ ಸರ್ಕಾರದ ಡಿಐಪಿ ದರದಲ್ಲಿ ಮೆ: ಅವಾಂತಿ ಅಡ್ವಟೈಸರ್ಸ್, ಬೆಂಗಳೂರು ಇವರ ಮೂಲಕ ನೀಡಲಾಗಿ ಒಟ್ಟಾರೆ 23,76,934/- ವೆಚ್ಚವಾಗಿರುತ್ತದೆ.

ಮೇಲಿನ ವಿವರಗಳೊಂದಿಗೆ 2021-22ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯ ಪ್ರವೇಶಾತಿ ಸಂಬಂಧದಲ್ಲಿ ಪ್ರವೇಶಾತಿಯ ಪ್ರಚಾರಕ್ಕಾಗಿ ಒಟ್ಟಾರೆ 47,79,176/- (ನಲವತ್ತೇಳು ಲಕ್ಷದ ಎಪ್ಪತ್ತೊಂಬತ್ತು ಸಾವಿರದ ಒಂದು ನೂರ ಎಪ್ಪತ್ತಾರು ರೂಪಾಯಿಗಳು ಮಾತ್ರ) ಗಳ ವೆಚ್ಚವನ್ನು ಭರಿಸಿದ್ದು, ಸದರಿ ಪ್ರಕ್ರಿಯೆಗೆ ಘಟನೋತ್ತರ ಮಂಜೂರಾತಿಯೊಂದಿಗೆ ಅನುಸಮರ್ಥನೆ ಕೋರಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸಭೆಗೆ ವಿಷಯವನ್ನು ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

ಸಭೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಯಿತು. ಮಾನ್ಯ ಸದಸ್ಯರಾದ ಶ್ರೀ ಎಲ್.ನಾಗೇಂದ್ರರವರು 2021-22ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ನಡೆದ ಒಟ್ಟು ಪ್ರವೇಶಾತಿ ಸಂಖ್ಯೆಯ ಬಗ್ಗೆ ಹಾಗೂ ವಿ.ವಿ.ನಿಲಯಕ್ಕೆ ಹಣ ಸಂದಾಯವಾಗಿರುವ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಕುಲಪತಿಗಳು, ಪ್ರವೇಶಾತಿ ಸಂಬಂಧ ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಪೂರ್ಣ ಮಾಹಿತಿಯನ್ನು ನೀಡಿದರು. ಮಾನ್ಯ ಕುಲಪತಿಗಳಿಂದ ವಿವರಣೆಯನ್ನು ಪಡೆದುಕೊಂಡ ಸಭೆಯು ವಿ.ವಿ.ನಿಲಯವು ಕೈಗೊಂಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಿತು.

* * * * * * *

<u>ವಿಷಯ ಸಂಖ್ಯೆ : 168.16</u>

ವಿಷಯ : ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯ ಮತ್ತು ಮೌಲ್ಯಮಾಪನ ಕಾರ್ಯವನ್ನು ಸಂಪೂರ್ಣ ಡಿಜಿಟಲೀಕರಣಗೊಳಿಸುವ **(Digital Evaluation)** ಸಂಬಂಧ ಅವಶ್ಯವಿರುವ **Software** ಮತ್ತು **Hardware** ಗಳನ್ನು ಖರೀದಿಸಿ ಅಳವಡಿಸುವ ಕಾರ್ಯವನ್ನು **M/s. Convergent Wireless Communications Pvt. Ltd., Bengaluru** ರವರಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶ ನೀಡಿರುವ ಬಗ್ಗೆ ಘಟನೋತ್ತರ ಅನುಮೋದನೆ ಕೋರಿ.

* * * * *

ವಿಶ್ವವಿದ್ಯಾನಿಲಯದ ಪರೀಕ್ಷಾ ಕಾರ್ಯವನ್ನು ಸಂಪೂರ್ಣ ಡಿಜಟಲೀಕರಣಗೊಳಿಸುವ (Digital Evaluation) ಸಂಬಂಧ ಅವಶ್ಯವಿರುವ Software ಮತ್ತು Hardware ಗಳನ್ನು ಖರೀದಿಸಿ ಅಳವಡಿಸುವ ಕಾರ್ಯವನ್ನು M/s. Convergent Wireless Communications Pvt. Ltd.,

ಕುಲಪತಿಗಳು



ಕುಲಸಚಿವರು

Bengaluru ರವರಿಗೆ ನೀಡುವ ಸಂಬಂಧ ವಿಷಯವನ್ನು 167ನೇ ವ್ಯವಸ್ಥಾಪನಾ ಮಂಡಳಿ ಸಭೆಗೆ ಮಂಡಿಸಲಾಗಿದ್ದು, ಸದರಿ ಸಂಸ್ಥೆಯವರಿಗೆ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಳ್ಳುವ ಸಂಬಂಧ ಸದರಿ ಸಭೆಯ ತೀರ್ಮಾನದಲ್ಲಿ ಸ್ಪಷ್ಟತೆಯಿಲ್ಲದಿದ್ದರಿಂದ ಮಾನ್ಯ ಕುಲಪತಿಗಳ ಅನುಮೋದನೆಯಂತೆ ಈಗಾಗಲೇ ಒಡಂಬಡಿಕೆ ಮಾಡಿಕೊಂಡು ಕಾರ್ಯಾದೇಶ ನೀಡಲಾಗಿರುವ ಪ್ರಕ್ರಿಯೆಗೆ ಘಟನ್ನೋತ್ತರ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ :

ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಘಟನೋತ್ತರ ಅನುಮೋದನೆ ನೀಡಿತು.

* * * * * * *

ವಿಷಯ ಸಂಖ್ಯೆ : 168.17

ವಿಷಯ : ಸರ್ಕಾರದಲ್ಲಿನ ಶೀಘ್ರಲಿಪಿಗಾರರ ಹುದ್ದೆಯ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದ ವಿದ್ಯಾರ್ಹತೆ ಹಾಗೂ ಮಾನದಂಡವನ್ನು ಪ್ರಸ್ತುತ ವಿವಿ ನಿಲಯವು ರಚಿಸಿಕೊಂಡಿರುವ ಕರಾಮುವಿ ಪರಿನಿಯಮ ಸಂಖ್ಯೆ XXIX ಗೆ ಅಳವಡಿಸಿಕೊಂಡು ಭಾಗಶಃ ತಿದ್ದುಪಡಿ ಮಾಡುವ ಬಗೆಗೆ.

* * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪರಿನಿಯಮ ಸಂಖ್ಯೆ XXIX ರಲ್ಲಿ ಶೀಘ್ರಲಿಪಿಗಾರರ ಹುದ್ದೆಯ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದಂತೆ ತನ್ನದೇ ಆದ ಪರಿನಿಯಮವನ್ನು ರಚಿಸಿಕೊಂಡಿದ್ದು, ಶೀಘ್ರಲಿಪಿಗಾರರ ಹುದ್ದೆಯ ನೇಮಕಾತಿ ಹಾಗೂ ಪದೋನ್ನತಿಗೆ ಈ ಕೆಳಕಂಡ ಮಾನದಂಡವನ್ನು ನಿಗಧಿಪಡಿಸಲಾಗಿರುತ್ತದೆ.

**Minimum Qualification**:

a) Must have passed a Degree Examination of any recognized university.

Or

A pass in S.S.L.C Examination or equivalent examination with five years of experiences as stenographer, and

b) Senior Typewriting and senior Shorthand Examination in Kannada conducted by the Department of public instruction or is a holder of a Diploma in Secretarial Practice with Kannada Shorthand and Kannada typewriting as optional (elective) subjects granted by the Board of Technical Education in Karnataka or possesses an equivalent qualification, and

c) Senior Typewriting and senior Shorthand Examination in English conducted by the Department of public Instruction or is a holder of a Diploma in Secretarial practice with English Shorthand and English Typewriting as optional (elective) subjects granted by the Board of Technical Education in Karnataka or possesses an equivalent qualification.

d) Should have certificate issued by a recognised computer training institute to the effect that he possess knowledge of computer fundamentals in addition to working knowledge of automation tools.

ಕುಲಪತಿಗಳು



ಕುಲಸಚಿವರು

e) However, preference shall be given to an employee working temporally in KSOU on daily wage basic/Contract Basis as Literary Assistant/Data Entry Operator, who have put in such service, not less than for a period of three years with proven records.

**Method of Recruitment:**

- 50% by direct recruitment,
- 25% by promotion from among Typist-Cum-A-Assistant and 25% by promotion among Data Entry operators-Cum-Assistants who possess the qualification prescribed under column(4) and must have put in a total service for a period of not less than 3 years excluding the period of probation/officiation in the cadre of Typist-cum-Assistant/ DEO-cum-Assistant in KSOU. ಎಂದಿರುತ್ತದೆ.

ಪ್ರಸ್ತುತ ರಾಜ್ಯ ಸರ್ಕಾರವು ಹೊರಡಿಸಿರುವ ದಿನಾಂಕ: 10.07.2019ರ ರಾಜ್ಯ ಪತ್ರ ಹಾಗೂ ದಿನಾಂಕ: 24.03.2021 ರ ಅಧಿಸೂಚನೆಯಲ್ಲಿ ಶೀಘ್ರಲಿಪಿಗಾರರ ಹುದ್ದೆಯ ನೇರ ನೇಮಕಾತಿ ಹಾಗೂ ಪದನ್ನೋತಿಗೆ ಈ ಕೆಳಕಂಡಂತೆ ಮಾನದಂಡಗಳನ್ನು ನಿಗಧಿಪಡಿಸಲಾಗಿರುತ್ತದೆ (ಅನುಬಂಧ–ಅ ಮತ್ತು ಆ).

**For direct recruitment;**

A pass in Pre University Course or equivalent qualification with Senior Typewriting and Senior Shorthand examination in Kannada conducted by the K.S.E.E.B. or Diploma in Secretarial Practice in Kannada Conducted by the Board of Technical Education in Karnataka of Possess an equivalent qualification.

**For Promotion:**

1) Must have passed Senior Typewriting and Senior Shorthand Examination in Kannada conducted by the Department of Public Instruction or is a holder of a Diploma in Secretarial Practice with Kannada Shorthand as (Optional/Elective) subject granted by the Board of Technical Education in Karnataka or possess an equivalent qualification.
2) Must have put in a service of not less than three in the cadres specified in column (4) ಎಂದಿರುತ್ತದೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ರಚಿಸಿಕೊಂಡಿರುವ ಪರಿನಿಯಮ ಸಂಖ್ಯೆ XXIX ರಲ್ಲಿನ ಶೀಘ್ರಲಿಪಿಗಾರ ಹುದ್ದೆಯ ನೇರ ನೇಮಕಾತಿ ಹಾಗೂ ಪದೋನ್ನತಿಗೆ ಸಂಬಂಧಿಸಿದ ಪರಿನಿಯಮಕ್ಕೆ ಸರ್ಕಾರದಲ್ಲಿ ಚಾಲ್ತಿಯಲ್ಲಿರುವ ವಿದ್ಯಾರ್ಹತೆ ಹಾಗೂ ಮಾನದಂಡದಂತೆ ವಿವಿ ನಿಲಯದ ಪ'ರಿನಿಯಮ ಸಂಖ್ಯೆ XXIX ರಲ್ಲಿನ Minimum Qualification ನಲ್ಲಿ ಕೆಳಕಂಡಂತೆ ಭಾಗಶಃ ತಿದ್ದುಪಡಿ ಕರಡು ಪರಿನಿಯಮವನ್ನು ರಚಿಸಲಾಗಿರುತ್ತದೆ.

"Under column no.4 (KSOU Statute-XXIX) Minimum Qualification, in Sl.No. (C) i.e., *Senior Shorthand Examinations in English conducted by the Department of Public Instruction or is a holder of a Diploma in Secretarial Practice with English Shorthand and English Type writing as optional (elective) subjects granted by the*

ಕುಲಪತಿಗಳು



ಕುಲಸಚಿವರು

*Board of Technical Education in Karnataka or possesses an equivalent qualification* shall be deleted."

ಸದರಿ ಕರಡು ಪರಿನಿಯಮಕ್ಕೆ ನಿಯಮಾನುಸಾರ ಸರ್ಕಾರದ ಅನುಮೋದನೆ ಪಡೆಯುವ ಸಂಬಂಧ ಮಾನ್ಯ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ಕೋರಿ ವಿಷಯ ಮಂಡಿಸಿದೆ.

ತೀರ್ಮಾನ :

ಸಭೆಯಲ್ಲಿ ವಿಷಯವನ್ನು ಚರ್ಚಿಸಲಾಯಿತು. ವಿ.ವಿ.ನಿಲಯವು ಪ್ರಸ್ತುತ ಅಳವಡಿಸಿಕೊಂಡಿರುವ ಪರಿನಿಯಮವನ್ನು ತಿದ್ದುಪಡಿ ಮಾಡಬೇಕಾದುದರ ಬಗ್ಗೆ ಸಭೆಯು ವಿವರಣೆಯನ್ನು ಕೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ಮಾನ್ಯ ಸದಸ್ಯರಾದ ಶ್ರೀ ಎನ್. ಕೃಷ್ಣೇಗೌಡರರು ಮಾತನಾಡಿ, ಶೀಘ್ರಲಿಪಿಗಾರರ ಹುದ್ದೆಯ ನೇಮಕಾತಿ ಹಾಗೂ ಪದೋನ್ನತಿಗೆ ಸರ್ಕಾರವು ಕೇಳುವ ವಿದ್ಯಾರ್ಹತೆ ಹಾಗೂ ಮಾನದಂಡಕ್ಕೂ, ಪ್ರಸ್ತುತ ವಿ.ವಿ.ನಿಲಯವು ಅಳವಡಿಸಿಕೊಂಡಿರುವ ಪರಿನಿಯಮದಲ್ಲಿನ ವಿದ್ಯಾರ್ಹತೆ ಹಾಗೂ ಮಾನದಂಡಗಳ ನಡುವೆ ಇರುವ ವ್ಯತ್ಯಾಸವನ್ನು ಸಭೆಯ ಗಮನಕ್ಕೆ ತಂದರು. ಈ ಸಂಬಂಧ, ವಿ.ವಿ.ನಿಲಯವು ವೃಂದ ಮತ್ತು ನೇಮಕಾತಿ ಪರಿನಿಯಮ ತಿದ್ದುಪಡಿ ಮಾಡುವ ಸಲುವಾಗಿ ಸಮಿತಿಯನ್ನು ರಚಿಸಿದ್ದು, (166ನೇ ಸಾಮಾನ್ಯ ಸಭೆ, ವಿಷಯ ಸಂಖ್ಯೆ : 166.12) ಸಮಿತಿಯ ವರದಿಯನ್ವಯ ಕ್ರಮ ಕೈಗೊಳ್ಳುವಂತೆ ಸಭೆಯು ನಿರ್ಣಯಿಸಿತು.

* * * * * * *

ವಿಷಯ ಸಂಖ್ಯೆ : 168.18

ವಿಷಯ : **Fabrication and Characterization of Hybrid Ferroelectric Discotic Liquid Crystal Solar Cell Prototype with One Square Foot Size** ಎಂಬ ವಿಷಯದ **Project Proposal** ಗೆ **DSIR** ನಿಂದ ರೂ. 50 ಲಕ್ಷಗಳು ಅಂಗೀಕೃತವಾದಲ್ಲಿ, ಕರಾಮುವಿ ವತಿಯಿಂದ ಸದರಿ ಪ್ರಾಜೆಕ್ಟ್‌ಗೆ ರೂ. 50 ಲಕ್ಷಗಳನ್ನು ಭರಿಸುವ ಬಗ್ಗೆ.

* * * * *

ಡಾ. ಆನಂದ ರಾಮ ಕೃಷ್ಣನ್‌ಸೆಲ್ವಿ ರಾಜನ್ ಇವರು ಕರಾಮುವಿಯ ಸಂಶೋಧನೆ ಮತ್ತು ಅಭಿವೃದ್ಧಿ ಘಟಕದಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಗಿ ದಿನಾಂಕ: 05-05-2022 ರಿಂದ ತಾತ್ಕಾಲಿಕವಾಗಿ ನೇಮಕಾತಿ ಹೊಂದಿರುತ್ತಾರೆ.

ಸದರಿಯವರು 'Individual Innovetor Program' ಅಡಿಯಲ್ಲಿ Fabrication and Characterization of Hybrid Ferroelectric Discotic Liquid Crystal Solar Cell Prototype with One Square Foot Size ಎಂಬ ವಿಷಯದ Project Proposal ಅನ್ನು Department of Scientific and Industrial Research (DSIR) ಗೆ ಸಲ್ಲಿಸಲು ಅನುಮತಿ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಾಜೆಕ್ಟ್‌ನ ಬಜೆಟ್ ರೂ. 1 ಕೋಟಿಯಾಗಿದ್ದು, ಪ್ರಾಜೆಕ್ಟ್ ಒಪ್ಪಿಗೆಯಾದಲ್ಲಿ DSIR ನಿಂದ ರೂ. 50 ಲಕ್ಷಗಳ ಅನುದಾನ ದೊರೆಯಲಿದ್ದು, ಉಳಿಕೆ ಮೊತ್ತ ರೂ. 50 ಲಕ್ಷಗಳನ್ನು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ ಪ್ರಾಯೋಜಿಸುವ ಬಗ್ಗೆ ವಿಷಯ ಮಂಡಿಸಿದೆ.

ಕುಲಪತಿಗಳು



ಕುಲಸಚಿವರು

ಸದರಿ ಪ್ರಾಜೆಕ್ಟ್‌ಗೆ DSIR ವತಿಯಿಂದ ಅನುಮೋದನೆ ದೊರೆತಲ್ಲಿ, Solar Simulator, External Quantum Efficiency System ಎಂಬ ರೂ. 80 ಲಕ್ಷಗಳ ಮೌಲ್ಯದ equipment ಅನ್ನು ಖರೀದಿಸಬೇಕಾಗಿರುತ್ತದೆ. ಕರಾಮುವಿಯ ಆವರಣದಲ್ಲಿ HFLC Solar Cell Lab ಅನ್ನು ಸ್ಥಾಪಿಸಿ ಸದರಿ equipment ಅನ್ನು ಬಳಕೆದಾರರಿಗಾಗಿ ಇರಿಸಲು ಉದ್ದೇಶಿಸಲಾಗಿದೆ ಹಾಗೂ ಪ್ರಾಜೆಕ್ಟ್ ಯಶಸ್ವಿಯಾದಲ್ಲಿ ಉತ್ಪನ್ನ ಮಾರಾಟದಿಂದ ವಿಶ್ವವಿದ್ಯಾನಿಲಯಕ್ಕೆ 'Royalty Share' ದೊರೆಯುತ್ತದೆ.

ಮೇಲ್ಕಂಡ ಅಂಶಗಳನ್ನು ವ್ಯವಸ್ಥಾಪನ ಮಂಡಳಿಯ ಅವಗಾಹನೆಗೆ ತರುತ್ತಾ, Fabrication and Characterization of Hybrid Ferroelectric Discotic Liquid Crystal Solar Cell Prototype with One Square Foot Size ಎಂಬ ವಿಷಯದ Project Proposal ಗೆ DSIR ನಿಂದ ರೂ. 50 ಲಕ್ಷಗಳು ಅಂಗೀಕೃತವಾದಲ್ಲಿ, ಕರಾಮುವಿ ವತಿಯಿಂದ ಸದರಿ ಪ್ರಾಜೆಕ್ಟ್‌ಗೆ ರೂ. 50 ಲಕ್ಷಗಳನ್ನು ಭರಿಸುವ ಬಗ್ಗೆ ವ್ಯವಸ್ಥಾಪನ ಮಂಡಳಿಯ ಸಭೆಯ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

<u>ತೀರ್ಮಾನ</u> :

**ಸಭೆಯಲ್ಲಿ ವಿಷಯವನ್ನು ಚರ್ಚಿಸಲಾಯಿತು. ವಿಶ್ವವಿದ್ಯಾನಿಲಯಕ್ಕೆ Fabrication and Characterization of Hybrid Ferroelectric Discotic Liquid Crystal Solar Cell Prototype with One Square Foot Size ಎಂಬ ವಿಷಯದ Project Proposal ಗೆ DSIR ನಿಂದ ರೂ. 50 ಲಕ್ಷಗಳು ಅಂಗೀಕೃತವಾದಲ್ಲಿ, ಕರಾಮುವಿ ವತಿಯಿಂದ ಸದರಿ ಪ್ರಾಜೆಕ್ಟ್‌ಗೆ ರೂ. 50 ಲಕ್ಷಗಳನ್ನು ಭರಿಸುವಂತೆ ಸಭೆಯು ನಿರ್ಣಯಿಸಿತು.**

* * * * * * *

<u>ವಿಷಯ ಸಂಖ್ಯೆ : 168.19</u>

**ವಿಷಯ : ದಿನಾಂಕ: 16.06.2022 ರಂದು ನಡೆದ ವಿ.ವಿ.ನಿಲಯದ 26ನೇ ಕಟ್ಟಡ ಸಮಿತಿ ಸಭೆಯ ನಡವಳಿಯ ಬಗ್ಗೆ.**

* * * * *

ದಿನಾಂಕ: 16.06.2022 ರ ಗುರುವಾರ ಸಂಜೆ 04.00 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಅತಿಥಿಗೃಹದ ಸಭಾಂಗಣದಲ್ಲಿ ನಡೆದ 26ನೇ ಕಟ್ಟಡ ಸಮಿತಿ ಸಭೆಯ ನಡವಳಿಯನ್ನು 168ನೇ ಸಾಮಾನ್ಯ ಸಭೆಯಲ್ಲಿ ಮಂಡಿಸಲು ಕೋರಿರುವುದರಿಂದ ಅನುಮೋದನೆಗಾಗಿ ಮಂಡಿಸಲಾಗಿದೆ.

* * * * * *

<u>ತೀರ್ಮಾನ</u> :

**26ನೇ ಕಟ್ಟಡ ಸಮಿತಿ ಸಭೆಯ ವಿಷಯದ ಬಗ್ಗೆ ಚರ್ಚಿಸಿದ ಸಭೆಯು, ಸಭೆಯ ನಡವಳಿಯನ್ನು ಅನುಮೋದಿಸಿತು.**

<u>ವಿಷಯ ಸಂಖ್ಯೆ : 168.20</u>

**ವಿಷಯ : ವಿಶ್ವವಿದ್ಯಾನಿಲಯದಲ್ಲಿ Call Center ಪ್ರಾರಂಭಿಸುವ ಬಗ್ಗೆ.**

* * * * *

ಕುಲಪತಿಗಳು



ಕುಲಸಚಿವರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳಿಗೆ ಕಲಿಕೆ ಬಗ್ಗೆ ಮಾಹಿತಿ ನೀಡಲು ಸಲಹೆ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಿಸಿದಂತೆ, ವಿಶ್ವವಿದ್ಯಾನಿಲಯದಲ್ಲಿ ಜಾರಿಗೊಳಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಸಮಯೋಚಿತ ಮಾಹಿತಿ ಮತ್ತು ಕುಂದು ಕೊರತೆಗಳನ್ನು ವಿಶ್ವವಿದ್ಯಾನಿಲಯದಲ್ಲಿ ಕಲಿಕಾರ್ಥಿಗಳ ಕಲ್ಯಾಣ ಘಟಕದಲ್ಲಿ Call Center Facility ಅಳವಡಿಸಿ ಕೊಳ್ಳುವ ಸಂಬಂಧ ಹೊಸದಾಗಿ ಪ್ರಾರಂಭಿಸಲು ಪ್ರಸ್ತಾವನೆ/ದರ ಅಂದಾಜು ವೆಚ್ಚದ ಮಾಹಿತಿಯನ್ನು (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ) ಲಿಖಿತ ರೂಪದಲ್ಲಿ ವಿವರವಾರು ಪ್ರಸ್ತಾವನೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವಂತೆ ದಿನಾಂಕ: 06.06.2022ರಂದು ಕಿಯೋನಿಕ್ಸ್ ಸಂಸ್ಥೆ ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿತ್ತು.

ಸದರಿಯವರು ವಿಶ್ವವಿದ್ಯಾನಿಲಯದ ಪತ್ರದ ಆಧಾರದ ಮೇಲೆ Call Center Facility ನೀಡುವ ಸಂಬಂಧ ಅಂದಾಜು ವೆಚ್ಚದ ಮೊತ್ತ ರೂ. 77,20,976/-ಗಳ ದರಪಟ್ಟಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುತ್ತಾರೆ. ಅನುಬಂಧ-(ಅ)ನಲ್ಲಿ ಲಗತ್ತಿಸಿದೆ ಹಾಗೂ ಸದರಿ ಸಂಬಂಧ ವ್ಯವಸ್ಥಾಪನಾ ಮಂಡಳಿಯ ಸಭೆಗೆ ಚರ್ಚೆ ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

* * * * * *

<u>ತೀರ್ಮಾನ</u> :

**ಪೂರ್ಣ ಮಾಹಿತಿಯ ಕೊರತೆಯಿಂದಾಗಿ ವಿಷಯವು ಸಭೆಯಲ್ಲಿ ಚರ್ಚೆಗೊಳ್ಳಲಿಲ್ಲ. ಈ ಕಾರಣದಿಂದಾಗಿ, ಮಾನ್ಯ ಕುಲಪತಿಗಳು ವಿಷಯವನ್ನು 'defer' ಮಾಡಲಾಗಿದೆ ಎಂಬುದಾಗಿ ಸಭೆಯ ಗಮನಕ್ಕೆ ತಂದರು.**

* * * * * *

ಸಭೆಗೆ ಮಂಡಿಸಿದ್ದ ಎಲ್ಲ ವಿಷಯಗಳು ಚರ್ಚೆಗೊಂಡ ನಂತರ, ಮಾನ್ಯ ಕುಲಪತಿಗಳು ವಿಶ್ವವಿದ್ಯಾನಿಲಯದಲ್ಲಿ ಕಳೆದ 1 ವರ್ಷ 1 ತಿಂಗಳಿನಿಂದ ಕರ್ತವ್ಯ ನಿರ್ವಹಿಸುತ್ತಿರುವ ಪ್ರೊ. ಆರ್. ರಾಜಣ್ಣ, ಕುಲಸಚಿವರು, ಇವರು ಈ ತಿಂಗಳ ಅಂತ್ಯಕ್ಕೆ ವಯೋ ನಿವೃತ್ತಿ ಹೊಂದುತ್ತಿರುವ ವಿಷಯವನ್ನು ಸಭೆಯಲ್ಲಿ ತಿಳಿಸಿದರು. ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಆರ್. ರಾಜಣ್ಣರವರು ವಿಶ್ವವಿದ್ಯಾನಿಲಯಕ್ಕೆ ಕುಲಸಚಿವರಾಗಿ ನೇಮಕಗೊಂಡು ಅಚ್ಚುಕಟ್ಟಾಗಿ ಕರ್ತವ್ಯವನ್ನು ನಿರ್ವಹಿಸಿ, ವಿಶ್ವವಿದ್ಯಾನಿಲಯಕ್ಕೆ ತಮ್ಮ ಸೇವೆಯನ್ನು ನೀಡಿರುತ್ತಾರೆ. ಹಾಗಾಗಿ, ಅವರಿಗೆ ವಿಶ್ವವಿದ್ಯಾನಿಲಯದ ಪರವಾಗಿ ಹಾಗೂ ವ್ಯವಸ್ಥಾಪನಾ ಮಂಡಳಿ ಸಭೆಯ ಮಾನ್ಯ ಸದಸ್ಯರುಗಳ ಪರವಾಗಿ ಮತ್ತು ವೈಯಕ್ತಿಕವಾಗಿ ಕೃತಜ್ಞತೆಗಳನ್ನು ಸಲ್ಲಿಸಿದರು. ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರುಗಳೆಲ್ಲರೂ ಪ್ರೊ. ಆರ್. ರಾಜಣ್ಣ, ಕುಲಸಚಿವರು, ಇವರಿಗೆ ನಿವೃತ್ತಿ ಜೀವನ ಸುಖಕರವಾಗಿರಲಿ, ಮುಂದಿನ ದಿನಗಳು ನಿಮಗೆ ಯಶಸ್ಸನ್ನು ತಂದುಕೊಡಲಿ ಎಂದು ಶುಭ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಕುಲಸಚಿವರು ಶುಭ ಕೋರಿದ ಎಲ್ಲ ಸದಸ್ಯರುಗಳಿಗೆ ಹಾಗೂ ಮಾನ್ಯ ಕುಲಪತಿಗಳಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು. ವಿಶೇಷವಾಗಿ, ನಾನು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರಾಗಿ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಕುಲಪತಿಗಳಿಗೆ ವೈಯಕ್ತಿಕವಾಗಿ ನನ್ನ ಅನಂತ ವಂದನೆಗಳು ಎಂದು ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ, ವ್ಯವಸ್ಥಾಪನಾ ಮಂಡಳಿಯ 168ನೇ ಸಾಮಾನ್ಯ ಸಭೆಗೆ ಆಗಮಿಸಿ ಮಂಡಿಸಲಾದ ವಿಷಯಗಳ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಮಾನ್ಯ ಕುಲಪತಿಗಳು ಎಲ್ಲ ಸದಸ್ಯರುಗಳಿಗೂ ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

* * * * * * *

ಕುಲಪತಿಗಳು

ಕುಲಸಚಿವರು